**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052.**

ಸಂಖ್ಯೆ: ಆರ್‌ಎಸ್‌ಆರ್/168/ಎಕ್ಸ್‌ಎಂಸಿ/2010-11. ದಿನಾಂಕ: 29-12-2010.

ವಿಷಯ:- ರಾಜ್ಯದಲ್ಲಿರುವ ಸಹಕಾರ ಸಂಘಗಳ (ಕೃಷಿ ಪತ್ತಿನ ರಚನಾ ವ್ಯವಸ್ಥೆಯ ಸಹಕಾರ ಸಂಘಗಳನ್ನು ಹೊರತುಪಡಿಸಿ) ಆಡಳಿತ ಮಂಡಳಿ ಸದಸ್ಯರು ಪಡೆಯಬಹುದಾದ ಸಭಾ ಭತ್ಯೆ, ದಿನಭತ್ಯೆ ಮತ್ತು ಪ್ರಯಾಣ ಭತ್ಯೆಗಳನ್ನು ನಿಗದಿಪಡಿಸುವ ಕುರಿತು.

ಉಲ್ಲೇಖ:- ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ 2010 (ಕರ್ನಾಟಕ ಅಧಿನಿಯಮ ಸಂಖ್ಯೆ 6/2010).

--

**ಪ್ರಸ್ತಾವನೆ:-**

ರಾಜ್ಯದಲ್ಲಿರುವ ಸಹಕಾರ ಸಂಘಗಳ ಆಡಳಿತ ಮಂಡಳಿ ಸದಸ್ಯರು (ಕೃಷಿ ಪತ್ತಿನ ರಚನಾ ವ್ಯವಸ್ಥೆ ಹೊರತುಪಡಿಸಿ) ಪಡೆಯಬಹುದಾದ ಗರಿಷ್ಠ ದಿನಭತ್ಯೆ, ಸಭಾಭತ್ಯೆ ಮತ್ತು ಪ್ರಯಾಣ ಭತ್ಯೆಗಳನ್ನು ನಿಗದಿಪಡಿಸಲು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 56 ರಲ್ಲಿ ಸಹಕಾರ ಸಂಘಗಳ ನಿಬಂಧಕರಿಗೆ ಅಧಿಕಾರ ದತ್ತವಾಗಿದೆ.

ಪ್ರಕರಣ 56 ರಲ್ಲಿ ದತ್ತವಾಗಿರುವ ಅಧಿಕಾರದನ್ವಯ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

## ಆದೇಶ

ಮೇಲಿನ ಪ್ರಸ್ತಾವನೆಯಲ್ಲಿ ಉಲ್ಲೇಖಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿನ ಸಹಕಾರ ಸಂಘಗಳ ವರ್ಗೀಕರಣ ಹಾಗೂ ಆಯಾ ಸಹಕಾರ ಸಂಘಗಳ ಆಡಳಿತ ಮಂಡಳಿ ಸದಸ್ಯರು ಪಡೆಯಬಹುದಾದ ದಿನಭತ್ಯೆ, ಸಭಾಭತ್ಯೆ ಮತ್ತು ಪ್ರಯಾಣ ಭತ್ಯೆಗಳನ್ನು ಕೆಳಕಂಡಂತೆ ನಿಗದಿಪಡಿಸಲಾಗಿದೆ.

| ಕ್ರ.ಸಂ. | ವರ್ಗ | ವಿವರಣೆ |
|---|---|---|
| 1 | I | (ಅ) ಕಳೆದ ಮೂರು ವರ್ಷಗಳಲ್ಲಿ ಲಾಭದಲ್ಲಿರುವ ಎಲ್ಲಾ ರಾಜ್ಯ ಮಟ್ಟದ ಸಹಕಾರ ಶೃಂಗ ಸಂಸ್ಥೆಗಳು/ಫೆಡರಲ್ ಸಹಕಾರ ಸಂಘಗಳು |
| | | (ಆ) ಮೇಲಿನ (ಅ) ನಲ್ಲಿ ಸೇರದಿರುವ ಎಲ್ಲಾ ರಾಜ್ಯ ಮಟ್ಟದ ಸಹಕಾರ ಶೃಂಗ/ಫೆಡರಲ್ ಸಂಘಗಳು. ಇವುಗಳ ಅಧ್ಯಕ್ಷರುಗಳು ಅಥವಾ ಸಭಾಪತಿಗಳು (ಅ) ಅಡಿಯಲ್ಲಿನ ಅವಕಾಶದಂತೆ ಪ್ರವಾಸ ಭತ್ಯೆ ಮತ್ತು ದಿನಭತ್ಯೆ ಸೌಲಭ್ಯಗಳನ್ನು ಪಡೆಯಲು ಅರ್ಹರಿದ್ದಾರೆ. |
| 2 | II | (ಅ) ರಾಜ್ಯಮಟ್ಟದ ಶೃಂಗ/ಫೆಡರಲ್ ಸಹಕಾರ ಸಂಘಗಳನ್ನು ಹೊರತುಪಡಿಸಿ, ಜಿಲ್ಲೆಗಿಂತ ಹೆಚ್ಚಿನ ಕಾರ್ಯವ್ಯಾಪ್ತಿಯನ್ನು ಹೊಂದಿರುವ ಮತ್ತು ಮೂರು ವರ್ಷಗಳಿಂದ ಸತತವಾಗಿ ಲಾಭದಲ್ಲಿರುವ ಎಲ್ಲಾ ಸ್ವರೂಪದ ಸಹಕಾರ ಸಂಘಗಳು. |
| | | (ಆ) ರಾಜ್ಯಮಟ್ಟದ ಶೃಂಗ/ಫೆಡರಲ್ ಸಹಕಾರ ಸಂಘಗಳನ್ನು ಹೊರತುಪಡಿಸಿ, ಜಿಲ್ಲೆಗಿಂತ ಹೆಚ್ಚಿನ ಕಾರ್ಯಕ್ಷೇತ್ರವನ್ನು ಹೊಂದಿರುವ ಅಂದರೆ II (ಅ)ನಲ್ಲಿ |

| | | |
|---|---|---|
| | | ಸೇರದಿರುವ ಎಲ್ಲಾ ಸ್ವರೂಪದ ಸಹಕಾರ ಸಂಘಗಳು. ಆದಾಗ್ಯೂ ಈ ಸಂಘಗಳ ಅಧ್ಯಕ್ಷರುಗಳು ಅಥವಾ ಸಭಾಪತಿಗಳು (ಅ) ಅಡಿಯಲ್ಲಿನ ಸಂಘಗಳಂತೆ ಪ್ರವಾಸ ಭತ್ಯೆ ಮತ್ತು ದಿನಭತ್ಯೆ ಸೌಲಭ್ಯಗಳನ್ನು ಪಡೆಯಲು ಅರ್ಹರಿದ್ದಾರೆ. |
| 3 | III | ಜಿಲ್ಲಾ ಮಟ್ಟದ ಕಾರ್ಯವ್ಯಾಪ್ತಿಯನ್ನು ಹೊಂದಿರುವ ಎಲ್ಲಾ ಸ್ವರೂಪದ ಸಹಕಾರ ಸಂಘಗಳು. |
| 4 | IV | ವರ್ಗ-I, II ಮತ್ತು III ರಲ್ಲಿ ಹೇಳಿರುವ ಸಹಕಾರ ಸಂಘಗಳನ್ನು ಹೊರತುಪಡಿಸಿ, ತಾಲ್ಲೂಕು ಮಟ್ಟದ ಆದರೆ ಜಿಲ್ಲಾ ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿಯುಳ್ಳ ಎಲ್ಲಾ ಸಹಕಾರ ಸಂಘಗಳು. |
| 5 | V | ವರ್ಗ-I, II, III ಮತ್ತು IVರಲ್ಲಿ ಹೇಳಲಾಗಿರುವ ಸಹಕಾರ ಸಂಘಗಳನ್ನು ಹೊರತುಪಡಿಸಿ ಉಳಿದ ತಾಲ್ಲೂಕು ಮಟ್ಟಕಿಂತ ಕಡಿಮೆ ಕಾರ್ಯವ್ಯಾಪ್ತಿಯುಳ್ಳ ಎಲ್ಲಾ ಸಹಕಾರ ಸಂಘಗಳು. |

ಮೇಲೆ ವರ್ಗೀಕರಿಸಿರುವ ಸಂಘಗಳು ಈ ಕೆಳಗಿನ ಆಯಾ ಕೋಷ್ಠಕಗಳಲ್ಲಿ ನಮೂದಿಸಿರುವ ಮೊತ್ತದ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಈ ಅರ್ಹತೆಯು ಮುಂದೆ ನಮೂದಿಸಿರುವ ಷರತ್ತುಗಳಿಗೊಳಪಟ್ಟಿದೆ.

**ಷರತ್ತುಗಳು:-**

1) ಸಭಾಭತ್ಯೆಯನ್ನು ಆಡಳಿತ ಮಂಡಳಿ ಮತ್ತು ಉಪ ಸಮಿತಿ ಸಭೆಗಳಿಗೆ ಹಾಜರಾದಾಗ ಮಾತ್ರ ಪಡೆಯತಕ್ಕದ್ದು.
2) ಆಡಳಿತ ಮಂಡಳಿ ಸದಸ್ಯರಿಗೆ ದಿನಭತ್ಯೆ ಮತ್ತು ಸಭಾಭತ್ಯೆ ಎರಡನ್ನು ಪಾವತಿಸತಕ್ಕದ್ದಲ್ಲ. ಇವರೆಡರಲ್ಲಿ ಒಂದನ್ನು ಮಾತ್ರ ಪಾವತಿಸತಕ್ಕದ್ದು.
3) ವಿಮಾನದಲ್ಲಿ ಪ್ರಯಾಣಿಸಿದ ಸಂದರ್ಭದಲ್ಲಿ ಹಾಸಲು ಚೀಟಿ (ಟಿಕೆಟ್) ಹಾಜರುಪಡಿಸಿ ಸಂಘದಿಂದ ಭತ್ಯೆ ಪಡೆಯತಕ್ಕದ್ದು.
4) ರೈಲಿನಲ್ಲಿ ಹವಾನಿಯಂತ್ರಿತ ಅಥವಾ ಪ್ರಥಮ ದರ್ಜೆ ಸೌಲಭ್ಯದಲ್ಲಿ ಪ್ರಯಾಣಿಸಿದ ಸಂದರ್ಭದಲ್ಲಿ ಹಾಸಲು ಚೀಟಿ (ಟಿಕೆಟ್) ಹಾಜರುಪಡಿಸಿ ಸಂಘದಿಂದ ಭತ್ಯೆ ಪಡೆಯತಕ್ಕದ್ದು.
5) ಸಂಬಂಧಪಟ್ಟ ಎಲ್ಲಾ ಸಹಕಾರ ಸಂಘಗಳು ತಮ್ಮ ಬೈಲಾದಲ್ಲಿ ಸೂಕ್ತ ಅವಕಾಶ ಕಲ್ಪಿಸಿ ತಿದ್ದುಪಡಿ ತರತಕ್ಕದ್ದು.

ಈ ಆದೇಶದ ಯಾವುದೇ ಅಂಶಗಳು ಸಹಕಾರಿ ಕೃಷಿ ಪತ್ತಿನ ರಚನಾ ವ್ಯವಸ್ಥೆಯಲ್ಲಿನ ಸಹಕಾರ ಸಂಘಗಳಿಗೆ ಅನ್ವಯವಾಗುವುದಿಲ್ಲ.

## <u>ಕೋಷ್ಟಕ–I (ಸಭಾಭತ್ಯೆ)</u>

| ಕ್ರ. ಸಂ. | ಸಹಕಾರ ಸಂಘಗಳ ವರ್ಗೀಕರಣ | ಪಡೆಯಬಹುದಾದ ಸಭಾಭತ್ಯೆ |
|---|---|---|
| 1 | I (ಅ) ಮತ್ತು (ಆ) | ಪ್ರತಿದಿನಕ್ಕೆ ₹ 400/– |
| | II (ಅ) ಮತ್ತು (ಆ) | ಪ್ರತಿದಿನಕ್ಕೆ ₹ 300/– |
| | III | ಪ್ರತಿದಿನಕ್ಕೆ ₹ 200/– |
| | IV | ಪ್ರತಿದಿನಕ್ಕೆ ₹ 150/– |
| | V | ಪ್ರತಿದಿನಕ್ಕೆ ₹ 100/– |

ಈ ಮೇಲ್ಕಂಡ ದರಗಳು ಸಭಾಭತ್ಯೆಯ ಗರಿಷ್ಠ ಪ್ರಮಾಣ ಮಿತಿಯನ್ನು ಸೂಚಿಸುತ್ತದೆ. ಆದರೆ ಯಾವುದೇ ಸಹಕಾರ ಸಂಘವು ಅವುಗಳಿಗಿಂತ ಕಡಿಮೆ ಪ್ರಮಾಣದ ದರಗಳನ್ನು ಬೈಲಾಗಳಲ್ಲಿ ನಿಗದಿಪಡಿಸಲು ಸ್ವಾತಂತ್ರ್ಯವನ್ನು ಹೊಂದಿರುತ್ತದೆ. ಸಂಘದ ಹಣಕಾಸಿನ ಪರಿಸ್ಥಿತಿಗೆ ಅನುಗುಣವಾಗಿ ಪ್ರವಾಸ ಭತ್ಯೆ ಮತ್ತು ಇತರೆ ಭತ್ಯೆಗಳ ಪಾವತಿಗೆ ಸಂಘವು ಕ್ರಮ ಕೈಗೊಳ್ಳತಕ್ಕದ್ದು.

## <u>ಕೋಷ್ಟಕ–ಖಖ (ದಿನಭತ್ಯೆ)</u>

| ಕ್ರ. ಸಂ. | ಸಹಕಾರ ಸಂಘಗಳ ವರ್ಗೀಕರಣ | ಬೆಂಗಳೂರು ನಗರ ಆದರೆ ಅಂಕಣ 4 ರಲ್ಲಿ ಹೇಳಿರುವ ನಗರಗಳನ್ನು ಹೊರತುಪಡಿಸಿ ರಾಜ್ಯದ ಹೊರಗೆ ಆದರೆ ಭಾರತದಲ್ಲಿನ ಇತರ ನಗರ ಪ್ರದೇಶಗಳಲ್ಲಿ ತಂಗುವಿಕೆಗೆ | ಅಹಮದಾಬಾದ್, ಮುಂಬೈ, ಕಲ್ಕತ್ತಾ, ಹೈದರಾಬಾದ್, ಕಾನ್ಪುರ, ಚನ್ನೈ, ಲಕ್ನೋ, ಮಸ್ಸೂರಿ, ನಾಗಪುರ, ಪುಣೆ, ಶಿಮ್ಲಾ, ಶ್ರೀನಗರ, ಗೋವಾ ನಗರಗಳಲ್ಲಿ ತಂಗುವಿಕೆಗೆ | ರಾಜ್ಯದೊಳಗಿನ ಇತರ ಪ್ರದೇಶಗಳಲ್ಲಿ ತಂಗುವಿಕೆಗೆ |
|---|---|---|---|---|
| 1 | 2 | 3 | 4 | 5 |
| **1** | I (ಅ) ಮತ್ತು (ಆ) | **₹ 1000/–** | **₹ 1500/–** | **₹ 750/–** |
| | II (ಅ) ಮತ್ತು (ಆ) | **₹ 850/–** | **₹ 1200/–** | **₹ 600/–** |
| | III | **₹ 700/–** | **₹ 1000/–** | **₹ 500/–** |
| | IV | **₹ 600/–** | **₹ 800/–** | **₹ 400/–** |
| | V | **₹ 500/–** | **₹ 600/–** | **₹ 300/–** |

ಟಿಪ್ಪಣಿ:– ದಿನಭತ್ಯೆ ಲೆಕ್ಕ ಹಾಕುವ ಕ್ರಮ:–

| | | |
|---|---|---|
| 1 | ಆರು ಘಂಟೆಯವರೆಗೆ ತಂಗಿದ್ದರೆ | ಭತ್ಯೆ ಪಡೆಯಲು ಅರ್ಹರಲ್ಲ. |
| 2 | ಆರು ಘಂಟೆ ಮೀರಿ ಹನ್ನೆರಡು ಘಂಟೆಗಳವರೆಗೆ | ದಿನಭತ್ಯೆ ಅರ್ಧದಷ್ಟು. |
| 3 | ಹನ್ನೆರಡು ಘಂಟೆ ಮೀರಿ ಇಪ್ಪತ್ತಾನಾಲ್ಕು ಘಂಟೆಯೊಳಗಿದ್ದಲ್ಲಿ | ಒಂದು ದಿನದ ಪೂರ್ಣ ಭತ್ಯೆ |

## ಕೋಷ್ಟಕ–III (ಪ್ರಯಾಣ ಭತ್ಯೆ)

| ಕ್ರ. ಸಂ. | ಸಹಕಾರ ಸಂಘದ ವರ್ಗ | ಪ್ರಯಾಣ ಭತ್ಯೆ ರಾಜ್ಯದೊಳಗೆ | | | ರಾಜ್ಯದ ಹೊರ ಭಾಗ ಆದರೆ ಭಾರತ ದೇಶದೊಳಗೆ ಪ್ರಯಾಣಿಸಿದಾಗ | | |
|---|---|---|---|---|---|---|---|
| | | ವಿಮಾನದ ಮೂಲಕ | ರೈಲಿನ ಮೂಲಕ | ಬಸ್ ಮೂಲಕ | ವಿಮಾನದ ಮೂಲಕ | ರೈಲಿನ ಮೂಲಕ | ಬಸ್ ಮೂಲಕ |
| 1 | I (ಅ) | ವಾಸ್ತವಿಕ ವಿಮಾನ ದರ | ಹವಾ ನಿಯಂತ್ರಿತ ಎರಡನೇ/ ಮೂರನೇ ದರ್ಜೆ ರೈಲ್ವೆ/ಒಂದನೇ ದರ್ಜೆ ಪ್ರಯಾಣದ ಒಂದು ಟಿಕೆಟ್ ದರದಷ್ಟು | ಬಸ್ ದರದ ಒಂದೂವರೆ ಪಟ್ಟು | ವಾಸ್ತವಿಕ ವಿಮಾನ ದರ | ಹವಾ ನಿಯಂತ್ರಿತ ಎರಡನೇ/ ಮೂರನೇ ದರ್ಜೆ ರೈಲ್ವೆ/ಒಂದನೇ ದರ್ಜೆ ಪ್ರಯಾಣದ ಒಂದು ಟಿಕೆಟ್ ದರದಷ್ಟು | ಬಸ್ ದರದ ಒಂದೂ ವರೆಯಷ್ಟು |
| | I(ಆ) | – | ಹವಾ ನಿಯಂತ್ರಿತ ಮೂರನೇ ದರ್ಜೆ ರೈಲ್ವೆ/ಒಂದನೇ ದರ್ಜೆ ಪ್ರಯಾಣದ ಒಂದು ಟಿಕೆಟ್ ದರದಷ್ಟು | ಬಸ್ ದರದ ಒಂದೂ ವರೆಯಷ್ಟು | – | ಹವಾ ನಿಯಂತ್ರಿತ ಮೂರನೇ ದರ್ಜೆ ರೈಲ್ವೆ/ಒಂದನೇ ದರ್ಜೆ ಪ್ರಯಾಣದ ಒಂದು ಟಿಕೆಟ್ ದರದಷ್ಟು | ಬಸ್ ದರದ ಒಂದೂ ವರೆಯಷ್ಟು |

| ಕ್ರ. ಸಂ. | ಸಹಕಾರ ಸಂಘದ ವರ್ಗ | ಪ್ರಯಾಣ ಭತ್ಯೆ ರಾಜ್ಯದೊಳಗೆ | | | ರಾಜ್ಯದ ಹೊರ ಭಾಗ ಆದರೆ ಭಾರತ ದೇಶದೊಳಗೆ ಪ್ರಯಾಣಿಸಿದಾಗ | | |
|---|---|---|---|---|---|---|---|
| | | ವಿಮಾನದ ಮೂಲಕ | ರೈಲಿನ ಮೂಲಕ | ಬಸ್ ಮೂಲಕ | ವಿಮಾನದ ಮೂಲಕ | ರೈಲಿನ ಮೂಲಕ | ಬಸ್ ಮೂಲಕ |
| | II (ಅ) | – | ಹವಾ ನಿಯಂತ್ರಿತ ಮೂರನೇ ದರ್ಜೆ ರೈಲ್ವೆ/ಒಂದನೇ ದರ್ಜೆ ಪ್ರಯಾಣದ ಒಂದು ಟಿಕೆಟ್ ದರದಷ್ಟು | ಬಸ್ ದರದ ಒಂದೂ ವರೆಯಷ್ಟು | – | ಹವಾ ನಿಯಂತ್ರಿತ ಮೂರನೇ ದರ್ಜೆ ರೈಲ್ವೆ/ಒಂದನೇ ದರ್ಜೆ ಪ್ರಯಾಣದ ಒಂದು ಟಿಕೆಟ್ ದರದಷ್ಟು | ಬಸ್ ದರದ ಒಂದೂ ವರೆಯಷ್ಟು |
| | II (ಆ) | – | ಹವಾ ನಿಯಂತ್ರಿತ ಮೂರನೇ ದರ್ಜೆ ರೈಲ್ವೆ/ಒಂದನೇ ದರ್ಜೆ ಪ್ರಯಾಣದ ಒಂದು ಟಿಕೆಟ್ ದರದಷ್ಟು | ಬಸ್ ದರದ ಒಂದೂ ವರೆಯಷ್ಟು | – | ಹವಾ ನಿಯಂತ್ರಿತ ಮೂರನೇ ದರ್ಜೆ ರೈಲ್ವೆ/ಒಂದನೇ ದರ್ಜೆ ಪ್ರಯಾಣದ ಒಂದು ಟಿಕೆಟ್ ದರದಷ್ಟು | ಬಸ್ ದರದ ಒಂದೂ ವರೆಯಷ್ಟು |
| | III | ಅರ್ಹರಿರುವುದಿಲ್ಲ | 2ನೇ ದರ್ಜೆ ರೈಲ್ವೆ ಪ್ರಯಾಣದ ಒಂದು ಟಿಕೆಟ್ ದರದಷ್ಟು | ಬಸ್ ದರದ ಒಂದೂ ವರೆಯಷ್ಟು | – | – | – |
| | IV | ಅರ್ಹರಿರುವುದಿಲ್ಲ | 2ನೇ ದರ್ಜೆ ರೈಲ್ವೆ ಪ್ರಯಾಣದ ಒಂದು ಟಿಕೆಟ್ ದರದಷ್ಟು | ಬಸ್ ದರದ ಒಂದೂ ವರೆಯಷ್ಟು | – | – | – |
| | V | ಅರ್ಹರಿರುವುದಿಲ್ಲ | 2ನೇ ದರ್ಜೆ ರೈಲ್ವೆ ಪ್ರಯಾಣದ ಒಂದು ಟಿಕೆಟ್ ದರದಷ್ಟು | ಬಸ್ ದರದ ಒಂದೂ ವರೆಯಷ್ಟು | – | – | – |

**ಟಿಪ್ಪಣಿ:–**

1) ವಿಮಾನ ಪ್ರಯಾಣ ದರವನ್ನು ಪಡೆಯಲು ಟಿಕೆಟ್ ನಂಬರ್ ಸಹಿತ ವಿಮಾನದಲ್ಲಿ ಪ್ರಯಾಣ ಮಾಡಿರುವನೆಂದು ಪ್ರಮಾಣ ಪತ್ರ ಸಲ್ಲಿಸುವುದು.
2) ರೈಲ್ವೆ ಹವಾನಿಯಂತ್ರಿತ ಅಥವಾ ಒಂದನೇ ದರ್ಜೆ ಪ್ರಯಾಣ ಭತ್ಯೆಯನ್ನು ಪಡೆಯಲು ಟಿಕೆಟ್ ನಂಬರ್ ನಮೂದಿಸುವುದರ ಜೊತೆಗೆ ಪ್ರಯಾಣ ಮಾಡಿರುವನೆಂದು ಪ್ರಮಾಣ ಪತ್ರ ಸಲ್ಲಿಸುವುದು.

ವಿಶೇಷ ಸಂದರ್ಭಗಳಲ್ಲಿ ವರ್ಗ–I(ಆ), II, III & IV ನೇ ವರ್ಗದ ಸಹಕಾರ ಸಂಘಗಳ ಪದಾಧಿಕಾರಿಗಳು ವಿಮಾನದಲ್ಲಿ ಪ್ರಯಾಣಿಸುವ ಸಂದರ್ಭದಲ್ಲಿ ಸಹಕಾರ ಸಂಘಗಳ ನಿಬಂಧಕರಿಂದ ಪೂರ್ವಾನುಮತಿ ಪಡೆದು ಪ್ರಯಾಣಿಸಬಹುದಾಗಿದೆ.

ದಿನಭತ್ಯೆ, ಪ್ರಯಾಣ ಭತ್ಯೆ, ಸಭೆಭತ್ಯೆಗಳನ್ನು ಪಾವತಿಸಿದಾಗ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮೇಲು ರುಜು ಮಾಡಿ ಪಾವತಿಸತಕ್ಕದ್ದು.

ಈ ಆದೇಶದ ಸೂಚನೆಗಳನ್ನು ಯಥಾವತ್ತಾಗಿ ಪಾಲನೆ ಮಾಡತಕ್ಕದ್ದು.

ಸ /

(ಎಸ್.ಜಿ.ಹೆಗಡೆ)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು

**ಇವರಿಗೆ;–**

1) ಕೇಂದ್ರ ಕಛೇರಿಯ ಎಲ್ಲಾ ವಿಭಾಗೀಯ ಮುಖ್ಯಸ್ಥರುಗಳಿಗೆ.
2) ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರುಗಳಿಗೆ.
3) ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರುಗಳಿಗೆ.
4) ಎಲ್ಲಾ ಉಪ ವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ.
5) ಎಲ್ಲಾ ತಾಲ್ಲೂಕು ಸಹಕಾರ ಅಭಿವೃದ್ಧಿ ಅಧಿಕಾರಿಗಳು.
   ಕ್ರಮ ಸಂಖ್ಯೆ (1) ರಿಂದ (5) ಇವರುಗಳಿಗೆ ಕಳುಹಿಸುತ್ತಾ ತಮ್ಮ ಕಾರ್ಯವ್ಯಾಪ್ತಿಯಲ್ಲಿನ ಪ್ರತಿಯೊಂದು ಸಹಕಾರ ಸಂಘಕ್ಕೂ ಈ ಆದೇಶದ ಪ್ರತಿಯನ್ನು ಕಳುಹಿಸಲು ಕೋರಿದೆ.
6) ಎಲ್ಲಾ ಶೃಂಗ ಸಹಕಾರ ಸಂಸ್ಥೆಗಳು
7) ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸುತ್ತಾ ಅವರ ಇಲಾಖೆಯ ಎಲ್ಲಾ ಅಧೀನ ಕಛೇರಿಗಳಿಗೆ ಕಳುಹಿಸಿ ಲೆಕ್ಕ ಪರಿಶೋಧನೆಯ ವೇಳೆಯಲ್ಲಿ ಗಮನಿಸಲು ಕೋರಿದೆ.

**ಪ್ರತಿಯನ್ನು ಗೌರವಪೂರ್ವಕವಾಗಿ ಕೆಳಕಂಡವರಿಗೆ ಸಲ್ಲಿಸಿದೆ:–**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಸಂಪಾದಕರು, ಸಹಕಾರ ಪತ್ರಿಕೆ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು ಇವರಿಗೆ ಹಾಗೂ ಸಂಪಾದಕರು, ಪಟ್ಟಣ ಬ್ಯಾಂಕುಗಳ ಪತ್ರಿಕೆ, ಬೆಂಗಳೂರು ಇವರುಗಳಿಗೆ ಕಳುಹಿಸುತ್ತಾ ಈ ಆದೇಶವನ್ನು ಪತ್ರಿಕೆಗಳಲ್ಲಿ ಪ್ರಕಟಿಸಲು ಕೋರಿದೆ.

**ಕರ್ನಾಟಕ ಸರ್ಕಾರ**
**(ಸಹಕಾರ ಇಲಾಖೆ)**
# ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು.

ಕ್ರಮ ಸಂಖ್ಯೆ: ಆರ್‌ಎಸ್‌ಆರ್.111.ಎಕ್ಸ್‌ಎಂಸಿ/2007–08. ದಿನಾಂಕ: 29–10–2007.

ವಿಷಯ:– ಸಹಕಾರ ಸಂಘಗಳಲ್ಲಿ ವಾಹನ ಖರೀದಿ ಹಾಗೂ ವಾಹನ ವಿಲೇವಾರಿ ಬಗ್ಗೆ.

**–: ಸುತ್ತೋಲೆ :–**

ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆಯಡಿ ನೋಂದಣಿಯಾಗಿರುವ ವಿವಿಧ ಸಹಕಾರ ಸಂಘಗಳಿಗೆ / ಬ್ಯಾಂಕುಗಳಿಗೆ / ಸಂಸ್ಥೆಗಳಿಗೆ ತಮ್ಮ ದಿನನಿತ್ಯದ ವ್ಯವಹಾರಗಳಿಗಾಗಿ ಹೊಸ ವಾಹನಗಳನ್ನು ಕೊಳ್ಳಲು ಮತ್ತು ಹಳೆ ವಾಹನಗಳನ್ನು ವಿಲೇವಾರಿ ಮಾಡಲು ಕಾಲ ಕಾಲಕ್ಕೆ ಮಾರ್ಗಸೂಚಿಗಳನ್ನು ನೀಡಲಾಗಿತ್ತು. ಇತ್ತೀಚಿನ ಮಾರ್ಗಸೂಚಿಯಂತೆ ಹೊಸ ವಾಹನಗಳ ಖರೀದಿ ಮತ್ತು ಹಳೆ ವಾಹನಗಳ ವಿಲೇವಾರಿಗಾಗಿ ಅನುಮತಿ ನೀಡಲು ಸಹಕಾರ ಸಂಘಗಳ ನಿಬಂಧಕರಿಗೆ ಅಧಿಕಾರವಿತ್ತು. ಆದರೆ ಹೊಸ ವಾಹನಗಳನ್ನು ಕೊಳ್ಳುವ ಬಹುತೇಕ ಸಹಕಾರ ಸಂಸ್ಥೆಗಳು ಲಾಭದಲ್ಲಿ ನಡೆಯುತ್ತಿರುವುದನ್ನು ಮನಗಂಡು, ಈ ಕುರಿತು ಈ ಕೆಳಕಂಡ ಮಾರ್ಗಸೂಚಿಗಳನ್ನು ನೀಡಲಾಗಿದೆ.

## I ಹೊಸ ವಾಹನ ಖರೀದಿ

1) ಕ್ರೋಢೀಕೃತ ನಷ್ಟದಲ್ಲಿ ಇಲ್ಲದ ಹಾಗೂ ಸತತವಾಗಿ 5 ವರ್ಷಗಳಿಂದ ಲಾಭದಲ್ಲಿ ನಡೆಯುತ್ತಿರುವ ಸಹಕಾರ ಸಂಸ್ಥೆಗಳು ನಿಬಂಧಕರ ಕಛೇರಿಗೆ ಪ್ರಸ್ತಾವನೆ ಸಲ್ಲಿಸದೆ, ಅವಶ್ಯವಿದ್ದಲ್ಲಿ ಈ ಕೆಳಕಂಡಂತೆ ಆಡಳಿತ ಮಂಡಳಿ ಅನುಮೋದನೆಯೊಂದಿಗೆ ವಾಹನ ಖರೀದಿಸಬಹುದು.

| ಕ್ರ. ಸಂ. | ಸಹಕಾರ ಸಂಘಗಳ ವಿಧ | ಹಿಂದಿನ ಸಹಕಾರ ವರ್ಷದಲ್ಲಿ ಗಳಿಸಿದ ಕನಿಷ್ಠ ನಿವ್ವಳ ಲಾಭದ ಮೊತ್ತ | ಖರೀದಿಸಬಹುದಾದ ವಾಹನಗಳ ಸಂಖ್ಯೆ | ಗರಿಷ್ಠ ಬೆಲೆಯ ಮಿತಿ ಒಂದು ವಾಹನಕ್ಕೆ |
|---|---|---|---|---|
| 1 | 2 | 3 | 4 | 5 |
| ಅ | ರಾಜ್ಯ ಮಟ್ಟದ ಹಾಗೂ ಇತರೆ ಸಹಕಾರ ಸಂಘಗಳು | ರೂ.2.00 ಕೋಟಿಗೂ ಮೇಲ್ಪಟ್ಟು | ಅಧ್ಯಕ್ಷರ ಹಾಗೂ ವ್ಯವಸ್ಥಾಪಕ ನಿರ್ದೇಶಕರ/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ತಲಾ ಒಂದು | ರೂ.20.00 ಲಕ್ಷ |
| ಆ | ರಾಜ್ಯ ಮಟ್ಟದ ಸಹಕಾರ ಸಂಘಗಳು | ರೂ.50.00 ಲಕ್ಷಕ್ಕೂ ಮೇಲ್ಪಟ್ಟು | ಅಧ್ಯಕ್ಷರ ಹಾಗೂ ವ್ಯವಸ್ಥಾಪಕ ನಿರ್ದೇಶಕರ/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ತಲಾ ಒಂದು | ರೂ.10.00 ಲಕ್ಷ |
| ಇ | ಜಿಲ್ಲಾ ಮಟ್ಟಕ್ಕಿಂತ ಹೆಚ್ಚು ಮತ್ತು ರಾಜ್ಯ ಮಟ್ಟಕ್ಕಿಂತ | ರೂ.40.00 ಲಕ್ಷಕ್ಕೂ ಮೇಲ್ಪಟ್ಟು | ಅಧ್ಯಕ್ಷರ ಹಾಗೂ ವ್ಯವಸ್ಥಾಪಕ ನಿರ್ದೇಶಕರ/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ತಲಾ ಒಂದು | ರೂ.8.00 ಲಕ್ಷ |

| | | | | |
|---|---|---|---|---|
| | ಕಡಿಮೆ | | | |
| ಈ | ಜಿಲ್ಲಾ ಮಟ್ಟ | ರೂ.32.00 ಲಕ್ಷಕ್ಕೂ ಮೇಲ್ಪಟ್ಟು | ಅಧ್ಯಕ್ಷರ ಹಾಗೂ ವ್ಯವಸ್ಥಾಪಕ ನಿರ್ದೇಶಕರ/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ತಲಾ ಒಂದು | ರೂ.8.00 ಲಕ್ಷ |
| ಉ | ಪಟ್ಟಣ ಸಹಕಾರ ಬ್ಯಾಂಕುಗಳು | ರೂ.24.00 ಲಕ್ಷಕ್ಕೂ ಮೇಲ್ಪಟ್ಟು | ಸಾಲ ವಸೂಲಾತಿಗಾಗಿ ಒಂದು ವಾಹನ | ರೂ.6.00 ಲಕ್ಷ |

ಇದೂ ಅಲ್ಲದೆ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು ಆರು ಲಕ್ಷ ರೂ.ಗಳ ಮಿತಿಗೊಳಪಟ್ಟು ಸಾಲ ವಸೂಲಾತಿಗಾಗಿ ಒಂದು ವಾಹನ ಖರೀದಿಸಬಹುದು.

2) ಕ್ರಮ ಸಂಖ್ಯೆ 1 ರಲ್ಲಿ ನಮೂದಿಸಿದ ಸಂಖ್ಯೆಗಿಂತ ಹೆಚ್ಚಿನ ವಾಹನಗಳನ್ನು ಖರೀದಿಸಲು ಇಚ್ಛಿಸುವ ಅಥವಾ ಮೇಲೆ ನಮೂದಿಸಿದಂತೆ ಕನಿಷ್ಠ ಪ್ರಮಾಣದ ಲಾಭ ಗಳಿಸದೇ ಇರುವ ಹಾಗೂ ಕ್ರಮ ಸಂಖ್ಯೆ 1 ರಲ್ಲಿ ನಮೂದಾಗದೆ ಇರುವ ಎಲ್ಲಾ ಇತರೆ ಸಹಕಾರ ಸಂಸ್ಥೆಗಳು ವಾಹನ ಖರೀದಿಸಬೇಕಾದಲ್ಲಿ ಸಹಕಾರ ಸಂಘಗಳ ನಿಬಂಧಕರ ಪೂರ್ವಾನುಮತಿಯನ್ನು ಪಡೆದು ಖರೀದಿಸತಕ್ಕದ್ದು.

3) ಮೇಲೆ ವಿವರಿಸಿದಂತೆ ಹೊಸ ವಾಹನಗಳನ್ನು ಕೊಳ್ಳಲು ಪ್ರಚಲಿತವಿರುವ ವಾಹನ ಖರೀದಿ ನಿಯಮಗಳನ್ನು ಆಧರಿಸಿ ಖರೀದಿಸತಕ್ಕದ್ದು.

## II ಹಳೆ ವಾಹನಗಳ ವಿಲೇವರಿ:-

ಹಾಲಿ ಇರುವ ಸುತ್ತೋಲೆಗಳಂತೆ ಹಳೆ ವಾಹನಗಳ ವಿಲೇವಾರಿ ಬಗ್ಗೆ ಸಹಕಾರ ಸಂಘಗಳ ನಿಬಂಧಕರ ಅನುಮತಿಯನ್ನು ಪಡೆಯಬೇಕಾಗಿದೆ. ಆದರೆ ಸದರಿ ಸುತ್ತೋಲೆಗಳನ್ನು ಹಿಂತೆಗೆದುಕೊಂಡು ಹಳೆ ವಾಹನಗಳ ಮಾರಾಟ / ವಿಲೇವಾರಿಗೆ ಈ ಕೆಳಕಂಡ ವಿಧಾನವನ್ನು ಅನುಸರಿಸಲು ತಿಳಿಸಲಾಗಿದೆ.

1) ವರಮಾನ ತೆರಿಗೆ ಕಾಯ್ದೆಯನ್ವಯ ವಾಹನಗಳಿಗೆ ಸವಕಳಿ (Depreciation fund) ತೆಗೆದಿರಿಸಿದ ಸಹಕಾರ ಸಂಘಗಳು ಸವಕಳಿ ತೆಗೆದು ವಾಹನ ಬೆಲೆ book value ಶೂನ್ಯವಾದ ಅಥವಾ ಶೂನ್ಯಕ್ಕೆ ಹತ್ತಿರ ಅಂದರೆ ರೂ.1,000/- ಒಳಗೆ ಇದ್ದಲ್ಲಿ ವಾಹನ ವಿಲೇವಾರಿ ಅಗತ್ಯವೆಂದು ಕಂಡುಬಂದಲ್ಲಿ ವಾಹನಗಳನ್ನು ಪಾರದರ್ಶಕ ಕಾಯ್ದೆಯಲ್ಲಿ ಹೇಳಿರುವ ಅಂಶಗಳನ್ನು ಅನುಸರಿಸಿ ನಿಬಂಧಕರ ಅನುಮೋದನೆ ಇಲ್ಲದೆಯೇ ವಿಲೇವಾರಿ ಮಾಡಲು ಕ್ರಮವಿಡಬಹುದಾಗಿದೆ.

2) ವಾಹನ ಬೆಲೆಗೆ ಅಗತ್ಯವಾದಷ್ಟು ಸವಕಳಿ ನಿಧಿ ತೆಗೆದಿರಿಸುವ ಮೊದಲೇ ವಾಹನವನ್ನು ವಿಲೇವಾರಿ ಮಾಡಬೇಕಾದ ಸನ್ನಿವೇಶಗಳು ಉಂಟಾದಲ್ಲಿ ಈ ಬಗ್ಗೆ ಸಹಕಾರ ಸಂಘಗಳ ನಿಬಂಧಕರಿಂದ ಪೂರ್ವಾನುಮತಿ ಪಡೆದು ವಿಲೇವಾರಿ ಮಾಡತಕ್ಕದ್ದು.

(ಸಹಿ)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

**ಕರ್ನಾಟಕ ಸರ್ಕಾರ**
**(ಸಹಕಾರ ಇಲಾಖೆ)**

# ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು.

ಕ್ರಮ ಸಂಖ್ಯೆ: ಆರ್‌ಎಸ್‌ಆರ್/ಸೌಕಾ/98/ಎಕ್ಸ್‌ಎಂಸಿ/2004–05. ದಿನಾಂಕ: 24–03–2005.

**ಸುತ್ತೋಲೆ ಸಂಖ್ಯೆ–194**

ವಿಷಯ:– ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ರಡಿಯಲ್ಲಿ ಸಹಕಾರಿಗಳನ್ನು ನೋಂದಾಯಿಸುವ ಬಗ್ಗೆ ಮಾರ್ಗಸೂಚಿಗಳು.

ಉಲ್ಲೇಖ:–
1) ಈ ಕಛೇರಿಯ ಪತ್ರ ಸಂ.ಆರ್‌ಎಸ್‌ಆರ್/ಸೌಕಾ/5/2001–02 ದಿನಾಂಕ 16–4–2002.
2) ಈ ಕಛೇರಿ ಪತ್ರ ಸಂ.ಆರ್‌ಎಸ್‌ಆರ್/ಸೌಕಾ/5/2001–02, ದಿನಾಂಕ 28–06–2002.
3) ಈ ಕಛೇರಿ ಪತ್ರ ಸಂ.ಆರ್‌ಎಸ್‌ಆರ್/ಸೌಕಾ/139/ಎಕ್ಸ್‌ಎಂಎ/ 2002–03 ದಿನಾಂಕ 10–02–2003.
4) ಈ ಕಛೇರಿ ಪತ್ರ ಸಂ.ಆರ್‌ಎಸ್‌ಆರ್/ಎಸ್‌ಎ/246/ಎಕ್ಸ್‌ಎಂಸಿ/ 2003–04 ದಿನಾಂಕ 07–2–2004.
5) ಗೌ: ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂ.21220/2003 ರ ದಿನಾಂಕ 30–10–2003 ರ ತೀರ್ಪು.
6) ಸರ್ಕಾರದ ಅಧಿಸೂಚನೆ ಸಂ.ಸಿಎಂಡಬ್ಲ್ಯೂ/116/ಸಿಎಲ್‌ಎಂ/2002, ದಿನದಾಂಕ 31–3–2004.
7) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ಪತ್ರ ಸಂ.2/2004–05, ದಿನಾಂಕ 19–7–2004.
8) ಸರ್ಕಾರದ ಅಧಿಸೂಚನೆ ಸಂ.ಸಿಎಂಡಬ್ಲ್ಯೂ/57/ಸಿಎಲ್‌ಎಂ/2004, ದಿನಾಂಕ 07–12–2004.

––

ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ರಾಜ್ಯದಲ್ಲಿ ದಿನಾಂಕ 01–01–2001 ರಿಂದ ಜಾರಿಗೆ ಬಂದ ಹಿನ್ನಲೆಯಲ್ಲಿ ಸದರಿ ಕಾಯ್ದೆ ಕಲಂ 4 ರಡಿ ಅಧಿಕಾರ ಹೊಂದಿದ ಸಕ್ಷಮ ಪ್ರಾಧಿಕಾರಿಗಳು ಸಹಕಾರಿಗಳನ್ನು ನೋಂದಣಿ ಮಾಡುವ ಕುರಿತು ಉಲ್ಲೇಖ(1) ರ ಪತ್ರದಲ್ಲಿ ಸಹಕಾರಿಗಳನ್ನು ನೋಂದಾಯಿಸಲು ಮತ್ತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರಡಿಯಲ್ಲಿ ನೋಂದಾಯಿತವಾದ ಸಹಕಾರ ಸಂಘಗಳನ್ನು ಸೌಹಾರ್ದ ಸಹಕಾರಿಯಾಗಿ ಪರಿವರ್ತಿಸಿ ನೋಂದಣಿ ಮಾಡುವ ಬಗ್ಗೆ ಸಂಕ್ಷಿಪ್ತ ಮಾರ್ಗಸೂಚಿಯನ್ನು ನೀಡಲಾಗಿತ್ತು.

ಈ ಮಾರ್ಗಸೂಚಿಗಳನ್ನು ಗೌ: ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ.21220/2003 ರಲ್ಲಿ ಪ್ರಶ್ನಿಸಿದ್ದು, ಸದರಿ ನ್ಯಾಯಾಲಯದ ಆದೇಶದ ಅನ್ವಯ ಮತ್ತು ಸೌಹಾರ್ದ ಕಾಯ್ದೆಗೆ ತಿದ್ದುಪಡಿಯಾದ ನಂತರ ದಿನಾಂಕ 31–3–2004 ರಿಂದ ಜಾರಿಗೆ ತಂದಿರುವ ಕಾರಣ ಉಲ್ಲೇಖ(7) ರ ಪತ್ರದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಹೊಸದಾಗಿ ಮಾರ್ಗಸೂಚಿಗಳನ್ನು ಹೊರಡಿಸಲು ಈ ಕಛೇರಿಯನ್ನು ಕೋರಿರುತ್ತದೆ. ಉಲ್ಲೇಖ(1) ಮತ್ತು (3) ರ ಪತ್ರಗಳನ್ನು ರದ್ದುಪಡಿಸುತ್ತಾ, ಉಲ್ಲೇಖ(8) ರ ಸರ್ಕಾರದ ಅಧಿಸೂಚನೆಯಲ್ಲಿ

ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ರಡಿ ನಿಯಮಗಳು ರಚನೆಯಾಗಿದ್ದು, ಎಲ್ಲಾ ನೋಂದಣಿ ಪ್ರಾಧಿಕಾರಗಳು, ಏಕರೂಪದ ಪದ್ಧತಿಯನ್ನು ಅನುಸರಿಸಬೇಕಾಗುವುದು ಅವಶ್ಯಕವೆಂದು ಮನಗಂಡು ಕೆಳಕಂಡ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

**<u>ಮಾರ್ಗಸೂಚಿಗಳು:-</u>**

1. ಉದ್ದೇಶಿತ ಸೌಹಾರ್ದ ಸಹಕಾರಿಯ ನೋಂದಣಿ ಪೂರ್ವದಲ್ಲಿ ಕನಿಷ್ಠ ಹತ್ತು (10) ಜನ ಪ್ರವರ್ತಕರು, ಪ್ರವರ್ತಕರ ಸಭೆಯಲ್ಲಿ ಆಯ್ಕೆಯಾಗಿರಬೇಕು. ಪ್ರವರ್ತಕರ ಭಾವಚಿತ್ರವಿರುವ ಪರಿಚಯ ಪತ್ರ ಲಗತ್ತಿಸಬೇಕು. ಸಹಕಾರಿಯ ಸ್ಥಾಪನೆಗೆ ಆರ್ಥಿಕ ಸಬಲತೆ : ಕಾರ್ಯ ಸಾಧ್ಯತೆ (Financial viability : feasibility) ಬಗ್ಗೆ ಯೋಜನಾ ವರದಿ ಮತ್ತು ತಾಂತ್ರಿಕ ವರದಿ (Project report & Technical report) ಗಳು ಇರಬೇಕು.

2. ಸಹಕಾರಿಯ ಉಪವಿಧಿಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆಯ ಕಲಂ 10 ರಂತೆ ಮತ್ತು ಇತ್ತೀಚೆಗೆ ಕಾಯ್ದೆ ತಿದ್ದುಪಡಿಯಾಗಿರುವ ಎಲ್ಲಾ ಅಂಶಗಳು ಸೇರ್ಪಡೆಯಾಗಿರಬೇಕು. ಇದಲ್ಲದೇ ಉಪವಿಧಿಯಲ್ಲಿ ಕಾಲಕಾಲಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್, ನಬಾರ್ಡ್ ಮತ್ತು ಕೇಂದ್ರ : ರಾಜ್ಯ ಸರ್ಕಾರಗಳು ನೀಡಿರುವ ಸುತ್ತೋಲೆ ನಿರ್ದೇಶನಗಳನ್ನು ಉಪವಿಧಿಯ ರಚನೆಯಲ್ಲಿ ಪಾಲಿಸಿರುವುದನ್ನು ಖಚಿತಪಡಿಸಿಕೊಳ್ಳಬೇಕು.

3. ಸಹಕಾರಿಯ ಹೆಸರಿನಲ್ಲಿ ಸೌಹಾರ್ದ ಎಂಬ ಪದ ಮತ್ತು ಪತ್ತಿನ ಸಹಕಾರಿಗಳಲ್ಲಿ ಪತ್ತಿನ ಸೌಹಾರ್ದ ಸಹಕಾರಿ ಎಂಬ ಅಂಶಗಳನ್ನು ಸೇರಿಸಿರಬೇಕು. ಉದ್ದೇಶಿತ ಸಹಕಾರಿಯ ಹೆಸರನ್ನು ಈಗಾಗಲೇ ನೋಂದಣಿ ಆಗಿರುವ ಸಹಕಾರ ಸಂಘ : ಸೌಹಾರ್ದ ಸಹಕಾರಿಗಳು ಬಳಸಿಲ್ಲಬಾರದು. ಆರ್ಥಿಕ ಸಬಲತೆ ಕಾರ್ಯಸಾಧ್ಯತೆ, ಉದ್ದೇಶಿತ ಸೌಹಾರ್ದ ಸಹಕಾರಿಯ ನೋಂದಣಿ ಬಗ್ಗೆ ಮನವರಿಕೆಯಾದ ನಂತರ, ಕಾಯ್ದೆ ಕಲಂ 2(ಡಿ) ರೀತ್ಯಾ ಆಯ್ಕೆಯಾಗಿರುವ ಮುಖ್ಯ ಪ್ರವರ್ತಕರಿಗೆ ಪ್ರಾರಂಭಿಕ ಷೇರು ಧನ ಸಂಗ್ರಹಣೆಗೆ ಮತ್ತು ಉದ್ದೇಶಿತ ಸೌಹಾರ್ದ ಸಹಕಾರಿಯ ನೋಂದಣಿಗೆ ಪ್ರಸ್ತಾವೆ ಸಲ್ಲಿಸಲು ಅನುಮತಿ ನೀಡತಕ್ಕದು.

4. ಉದ್ದೇಶಿತ ಸೌಹಾರ್ದ ಸಹಕಾರಿಯ ಆರ್ಥಿಕ ಸಬಲತೆ ಮತ್ತು ಕಾರ್ಯಸಾಧ್ಯತೆಯನ್ನು ದೃಡಪಡಿಸಿಕೊಂಡ ನಂತರ ಪ್ರಾಧಿಕಾರ ನಿಬಂಧಕರು, ಪತ್ತಿನ ಕಾರ್ಯ ಉದ್ದೇಶವಿರುವ ಸಹಕಾರಿಗಳಿಗೆ ಕೆಳಗೆ ನಮೂದಿಸಿರುವ ಕನಿಷ್ಟ ಸದಸ್ಯರಿಂದ ಪ್ರಾರಂಭಿಕ ಷೇರು ಹಣ ಸಂಗ್ರಹಿಸಲು ಸೂಚಿಸತಕ್ಕದ್ದು.

| **ಕ್ರ. ಸಂ.** | **ಸಹಕಾರಿಯ ಕಾರ್ಯವ್ಯಾಪ್ತಿಯ ಜನಸಂಖ್ಯೆ** | **ಕನಿಷ್ಠ ಸದಸ್ಯರು** | **ಪ್ರಾರಂಭಿಕವಾಗಿ ಷೇರು ಧನ ಸಂಗ್ರಹಿಸಬೇಕಾದ ಮೊತ್ತ** |
|---|---|---|---|
| **1** | **2** | **3** | **4** |
| 1 | 2 ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ | **200** | **ರೂ.2.00 ಲಕ್ಷ** |
| 2 | 2 ಲಕ್ಷದ ಮೇಲ್ಪಟ್ಟು 5 ಲಕ್ಷದವರೆಗೆ | **300** | **ರೂ.3.00 ಲಕ್ಷ** |
| 3 | 5 ಲಕ್ಷದ ಮೇಲ್ಪಟ್ಟು 10 ಲಕ್ಷದವರೆಗೆ | **500** | **ರೂ.5.00 ಲಕ್ಷ** |
| 4 | 10 ಲಕ್ಷದ ಮೇಲ್ಪಟ್ಟು 20 ಲಕ್ಷದವರೆಗೆ | **750** | **ರೂ.8.00 ಲಕ್ಷ** |
| 5 | 20 ಲಕ್ಷಕ್ಕೆ ಮೇಲ್ಪಟ್ಟು | **1000** | **ರೂ.10.00 ಲಕ್ಷ** |

ಪತ್ತೇತರ ಸೌಹಾರ್ದ ಸಹಕಾರಿಗಳ ನೋಂದಣಿ ಪ್ರಸ್ತಾವೆಯಲ್ಲಿ ಲಗತ್ತಿಸಿರುವಂತೆ ಆರ್ಥಿಕ ಸಬಲತೆ ಮತ್ತು ಕಾರ್ಯಸಾಧ್ಯತಾ ಯೋಜನಾ ವರದಿಯನ್ನು ತಯಾರಿಸಬೇಕು. ಯೋಜನಾ ವರದಿಯಲ್ಲಿ ಪ್ರಾರಂಭಿಕ ಐದು (5) ವರ್ಷಗಳಲ್ಲಿ ಮೂಲ ಷೇರು ಧನ ಸಂಪನ್ಮೂಲ ಸಂಗ್ರಹಣೆಯ ಗುರಿಯಲ್ಲಿ ನಮೂದಿಸಿರುವ ಮೊತ್ತದಲ್ಲಿ ಮೊದಲನೇ ವರ್ಷಕ್ಕೆ ನೊಂದಾಯಿಸಲು ಗುರಿ ನಿಗಧಿಪಡಿಸಿಕೊಂಡಿರುವ ಕನಿಷ್ಠ ಸದಸ್ಯರಿಂದ ಷೇರು ಧನ ಸಂಗ್ರಹಿಸಲು ಗುರಿ ನಿಗಧಿಪಡಿಸತಕ್ಕದ್ದು.

5. ಕಲಂ 5(2) (ಡಿ) ಅನ್ವಯ ಉಪವಿಧಿಯಲ್ಲಿ ನಮೂದಿಸಿರುವ ಒಟ್ಟು ಅಧಿಕೃತ ಷೇರು ಬಂಡವಾಳದ ಮೊತ್ತಕ್ಕೆ ಶೇ.1% ನೋಂದಣಿ ಶುಲ್ಕವನ್ನು ಕನಿಷ್ಟ ರೂ.500/–, ಗರಿಷ್ಠ ರೂ.5000/– ಗಳನ್ನು ನಿಗಧಿಪಡಿಸಿ, ನೋಂದಣಿ ಶುಲ್ಕವನ್ನು ಸರ್ಕಾರಕ್ಕೆ ಈ ಕೆಳಕಂಡ ಲೆಕ್ಕ ಶೀರ್ಷಿಕೆಗೆ ಪಾವತಿ ಮಾಡತಕ್ಕದ್ದು.

**0425–ಸಹಕಾರ–00–800–ಇತರೇ ಸ್ವೀಕೃತಿ–0–09**
**ನೋಂದಣಿ ಶುಲ್ಕ (ಸೌಹಾರ್ದ) 0425–00–800–0–09**

**0425-Cooperation-00-800-Other receipts-0-09**
**Registration fee (Souharda) 0425-00-800-0-09**

6. ಮಹಿಳೆಯರೇ ಸಂಘಟಿಸುವ ಸಹಕಾರಿಗಳು ಹಾಗೂ ಉಲ್ಲೇಖ(4) ರ ಪತ್ರದಲ್ಲಿ ತಿಳಿಸಿರುವ ಮಹಿಳಾ ಸ್ವಸಹಾಯ ಗುಂಪಿನ ಸದಸ್ಯರು, ಸಮೂಹ ಗುಂಪಿನ ಸದಸ್ಯರು ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ಮತ್ತು ಅಲ್ಪ ಸಂಖ್ಯಾತರು ಸಂಘಟಿಸುವ ಪತ್ತಿನ ಸಹಕಾರಿಗಳಿಗೆ ಕ್ರಮ ಸಂಖ್ಯೆ 4 ರಲ್ಲಿ ನಮೂದಿಸಿರುವ ಮೊತ್ತದಲ್ಲಿ ಶೇ.50% ರಷ್ಟು ಪ್ರಾರಂಭಿಕ ಷೇರು ಹಣ ಸಂಗ್ರಹಿಸಲು ಗುರಿ ನಿಗಧಿಪಡಿಸತಕ್ಕದ್ದು.

7. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರಡಿ ನೋಂದಣಿಯಾದ ಸಹಕಾರ ಸಂಘವು ಸೌಹಾರ್ದ ಸಹಕಾರಿಯಾಗಿ ಪರಿವರ್ತನೆ ಹೊಂದಲು ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಅವಕಾಶವಿದ್ದು, ಕಲಂ 5 ರಡಿಯಲ್ಲಿ ತಿಳಿಸಿರುವ ಅವಶ್ಯಕ ದಾಖಲಾತಿಗಳನ್ನು ಪ್ರಸ್ತಾವೆಯಲ್ಲಿ ಪಡೆದುಕೊಂಡ ನಂತರ, ಪರಿವರ್ತನಾ ನೋಂದಣಿಗೆ ಕ್ರಮವಿಡತಕ್ಕದ್ದು. ಅಗತ್ಯವಿದ್ದಲ್ಲಿ, ಮೂಲ ದಾಖಲೆ ಪತ್ರಗಳನ್ನು ಪರಿಶೀಲಿಸಿ, ದೃಢಪಡಿಸಿಕೊಂಡ ನಂತರ, ನೋಂದಣಿ ಮಾಡಬಹುದು. ಆದರೆ, ಪರಿವರ್ತನಾ ಪೂರ್ವದಲ್ಲಿ ಸಹಕಾರ ಸಂಘಕ್ಕೆ ಸದರಿ ಕಾಯಿದೆಯ ಕಲಂ 28ಎ(5), 30(1) ಮತ್ತು 31 ರಂತೆ ಆಡಳಿತಾಧಿಕಾರಿ : ವಿಶೇಷಾಧಿಕಾರಿ ನೇಮಕವಾಗಿರಬಾರದು.

8. ಸೌಹಾರ್ದ ಸಹಕಾರಿ ಕಾಯ್ದೆ ಅಡಿ ನೋಂದಣಿಯಾಗಿರುವ ಸಹಕಾರಿಯು ಒಂದು ಸಹಕಾರ ಸಂಘವಾಗಿ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ರಡಿ ಪರಿವರ್ತನೆ ಹೊಂದಲು ಅವಕಾಶವಿದ್ದು, ಇದಕ್ಕಾಗಿ ಸೌಹಾರ್ದ ಸಹಕಾರಿಯು ತನ್ನ ಸಾಮಾನ್ಯ ಸದಸ್ಯರ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು, ಕಆರ್ಯವ್ಯಾಪ್ತಿಯ ನಿಬಂಧಕರಿಗೆ ಪ್ರಸ್ತಾವೆ ಸಲ್ಲಿಸಬಹುದು, ಆದರೆ ಸೌಹಾರ್ದ ಸಹಕಾರಿಯು ಕಲಂ 14 ರಂತೆ ಪಾಲುದಾರಿಕೆ ಸಹಕಾರಿ, (Partnership Cooperative) ಯನ್ನಾಗಲೀ, ಕಲಂ 15 ರಂತೆ ಸಬ್ಸಿಡಿಯರೇ ಸಂಸ್ಥೆ (Subsidiary Organisation) ಯನ್ನಾಗಲೀ, ಮತ್ತು ಕಲಂ 16 ರಂತೆ ಸಹಯೋಗ ಸಹಕಾರಿ (Collaboration Cooperative) ಯನ್ನಾಗಲೀ, ಸ್ಥಾಪನೆ : ಸಂಘಟಣೆ ಮಾಡಿರಬಾರದು. ಇದಲ್ಲದೇ ಕಲಂ 35 ರಂತೆ ವಿಚಾರಣೆ ಇರಬಾರದು ಮತ್ತು ಕಲಂ 26(2) ಮತ್ತು 38 ರಂತೆ ಆಡಳಿತಾಧಿಕಾರಿಯನ್ನು ನೇಮಕವಾಗಿರಬಾರದು.

9. ಸಹಕಾರಿಯ ಕಾರ್ಯವ್ಯಾಪ್ತಿಯನ್ನು ನಿರ್ಧರಿಸುವಾಗ ಯಾವುದೇ ಬಗೆಯ ಆಡಳಿತಾತ್ಮಕ ವಿವಾದಗಳು ಬಾರದಂತೆ ಭೌಗೋಳಿಕ ಪ್ರದೇಶಗಳನ್ನು ಸ್ಪಷ್ಟವಾಗಿ ನಮೂದಿಸಿರಬೇಕು. ಭಾಗಶಃ ಪ್ರದೇಶ ಎಂಬ ಅರ್ಥವಿರಬಾರದು.

10. ಸಹಕಾರಿ ನೋಂದಣಿಯಾದ ನಂತರ ಎಲ್ಲಾ ಆದೇಶ ಪ್ರತಿಗಳನ್ನು ಉಪವಿಧಿಗಳೊಂದಿಗೆ ಸಹಕಾರಿಗಳ ನಿಬಂಧಕರಿಗೆ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ನಂ.132, 1ನೇ ಮಹಡಿ, ಕೆ.ಹೆಚ್.ರಸ್ತೆ, ಬೆಂಗಳೂರು–560 027 ಈ ಸಂಸ್ಥೆಗೆ ಸಹಕಾರಿಯ ಉಪವಿಧಿಯೊಂದಿಗೆ ಕಳುಹಿಸತಕ್ಕದ್ದು. ಸೌಹಾರ್ದ ಸಹಕಾರಿ ಬ್ಯಾಂಕ್ ಆಗಿದ್ದಲ್ಲಿ, ನೋಂದಣಿ ಆದೇಶದ ಪ್ರತಿ ಮತ್ತು ಉಪವಿಧಿಗಳೊಮದಿಗೆ ಪ್ರಧಾನ ವ್ಯವಸ್ಥಾಪಕರು, ಅರ್ಬನ್ ಬ್ಯಾಂಕ್ ವಿಭಾಗ, ಭಾರತೀಯ ರಿಸರ್ವ್ ಬ್ಯಾಂಕ್, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಕಳುಹಿಸತಕ್ಕದ್ದು.

11. ಒಂದು ಪ್ರಸ್ತಾವಿತ ಸೌಹಾರ್ದ ಸಹಕಾರಿ ಬ್ಯಾಂಕ್ ಅಥವಾ ಹಾಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರಡಿ ನೋಂದಣಿಯಾದ ಸಹಕಾರ ಬ್ಯಾಂಕ್‌ನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ ಪೂರ್ವಾನುಮತಿ ಇಲ್ಲದೆ ನೋಂದಣಿ ಮಾಡತಕ್ಕದ್ದಲ್ಲ, ಹಾಗೂ ಸದಸ್ಯತ್ವ ಕಾರ್ಯವ್ಯಾಪ್ತಿ, ಷೇರು ಹಣ ಸಂಗ್ರಹಣೆ ಇತ್ಯಾದಿ ಭಾರತೀಯ ರಿಸರ್ವ್ ಬ್ಯಾಂಕ್‌ನ ನಿರ್ದೇಶನಗಳನ್ನು ಪಾಲಿಸುವುದು.

12. ಸೌಹಾರ್ದ ಸಹಕಾರಿ ಕಾಯ್ದೆಯಡಿ ಹೊಸದಾಗಿ ಗೃಹ ನಿರ್ಮಾಣ ಸಹಕಾರಿ ಅಥವಾ ಯಾವುದೇ ಗೃಹ ನಿರ್ಮಾಣ ಸಹಕಾರ ಸಂಘವನ್ನು ಸೌಹಾರ್ದ ಸಹಕಾರಿಯಾಗಿ ಪರಿವರ್ತಿಸಿ ನೋಂದಣಿ ಮಾಡತಕ್ಕದ್ದಲ್ಲ.

ಮುಂದೆ ಕಾಲಕಾಲಕ್ಕೆ ಸರ್ಕಾರ, ನಿಬಂಧಕರು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನ ನಿರ್ದೇಶನಗಳನ್ನು ಪಾಲಿಸುವುದು ಮತ್ತು ಮೇಲ್ಕಂಡ ಮಾರ್ಗಸೂಚಿಯು ಈ ಸುತ್ತೋಲೆ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

(ಸಹಿ)
(ಕೆ.ಹೆಚ್.ಗೋಪಾಲಕೃಷ್ಣೇಗೌಡ)
ಸಹಕಾರಿಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052.**

ಸಂಖ್ಯೆ: ಆರ್‌ಎಸ್‌ಆರ್/ಎಕ್ಸ್‌ಎಂಸಿ/104/2009-10. ದಿನಾಂಕ: 06-10-2009.

11

**ಸುತ್ತೋಲೆ ಸಂಖ್ಯೆ-204**

ವಿಷಯ:- ಮಾನ್ಯ ವಿಧಾನ ಸಭೆ ಮತ್ತು ವಿಧಾನ ಪರಿಷತ್‌ನ ಸದಸ್ಯರುಗಳಿಗೆ ಇಲಾಖಾ ದಾಖಲಾತಿಗಳನ್ನು ಶುಲ್ಕ ರಹಿತವಾಗಿ ಒದಗಿಸುವ ಬಗ್ಗೆ.

ಉಲ್ಲೇಖ:- ಸರ್ಕಾರದ ಪತ್ರ ಸಂ.ಸಿಒ/105/ಸಿಸಿಬಿ/2009, ದಿನಾಂಕ 23-9-2009.

--

ವಿಧಾನಸಭೆ ಮತ್ತು ವಿಧಾನಪರಿಷತ್‌ನ ಮಾನ್ಯ ಸದಸ್ಯರುಗಳು ಇಲಾಖೆಗೆ ಸಂಬಂಧಿಸಿದ ಕಛೇರಿಗಳಲ್ಲಿ ಲಭ್ಯವಿರುವ ದಾಖಲಾತಿಗಳನ್ನು (ಮಾಹಿತಿ ಹಕ್ಕು ಕಾಯ್ದೆಯಡಿ ಹೊರತುಪಡಿಸಿ) ಲಿಖಿತವಾಗಿ ಒದಗಿಸುವಂತೆ ಕೋರಿದಲ್ಲಿ ಇನ್ನು ಮುಂದೆ ಶುಲ್ಕ ರಹಿತವಾಗಿ ನೀಡುವಂತೆ ಸುತ್ತೋಲೆ ಮೂಲಕ ಸೂಚನೆ ನೀಡಲು ಕ್ರಮವಹಿಸಲಾಗುವುದೆಂದು ದಿನಾಂಕ 24-7-2009 ರಂದು ವಿಧಾನ ಪರಿಷತ್‌ನಲ್ಲಿ ಮಾನ್ಯ ಇಲಾಖಾ ಸಚಿವರು ಸೂಚನೆ ನೀಡಿದ್ದು, ಅದರಂತೆ ಮಾನ್ಯ ವಿಧಾನಸಭಾ/ಪರಿಷತ್ ಸದಸ್ಯರು ಲಿಖಿತವಾಗಿ ಕೋರುವ ಮಾಹಿತಿಯನ್ನು ಅವರಿಗೆ ಶುಲ್ಕರಹಿತವಾಗಿ ಒದಗಿಸುವಂತೆ ಸುತ್ತೋಲೆ ಹೊರಡಿಸಲು ಉಲ್ಲೇಖದಲ್ಲಿನ ಸರ್ಕಾರದ ಪತ್ರದಲ್ಲಿ ಸೂಚಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಇನ್ನು ಮುಂದೆ ಮಾನ್ಯ ವಿಧಾನಸಭೆ/ಪರಿಷತ್‌ನ ಸದಸ್ಯರುಗಳಿಗೆ ಇಲಾಖೆಗೆ ಸಂಬಂಧಿಸಿದ ಕಛೇರಿಗಳಲ್ಲಿ ಲಭ್ಯವಿರುವ ದಾಖಲಾತಿಗಳನ್ನು (ಮಾಹಿತಿ ಹಕ್ಕು ಕಾಯ್ದೆಯಡಿ ಹೊರತುಪಡಿಸಿ) ಶುಲ್ಕರಹಿತವಾಗಿ ಒದಗಿಸಲು ಆದೇಶಿಸಲಾಗಿದೆ.

(ಸಹಿ)
(ಡಿ.ಎನ್.ನಾಯಕ್)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560 052.**

ಸಂಖ್ಯೆ: ಆರ್‌ಎಸ್‌ಆರ್/ಚು.ಸಂಭಾವನೆ/187/2009–10. ದಿನಾಂಕ: 20–01–2010.

**ಸುತ್ತೋಲೆ ಸಂಖ್ಯೆ–205**

ವಿಷಯ:– ಸಹಕಾರ ಸಂಘಗಳಿಗೆ ನಡೆಯುವ ಆಡಳಿತ ಮಂಡಳಿ ಚುನಾವಣೆಯಲ್ಲಿ ಚುನಾವಣಾಧಿಕಾರಿಗಳು, ಮತಗಟ್ಟೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಸಂಭಾವನೆ ನೀಡುವ ಕುರಿತು.

ಉಲ್ಲೇಖ:– ಈ ಕಛೇರಿ ಸುತ್ತೋಲೆ ಸಂ.120, ಕ್ರಮ ಸಂ.ಆರ್‌ಎಸ್‌ಆರ್/108/ 1995–96, ದಿನಾಂಕ 09–5–1998.

––

**ಪ್ರಸ್ತಾವನೆ:–**

ಉಲ್ಲೇಖದಲ್ಲಿನ ಸುತ್ತೋಲೆ ಸಂಖ್ಯೆ 120 ರಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ನಿಯಮಗಳಡಿಯಲ್ಲಿ ನೇಮಿಸುವ ಚುನಾವಣಾಧಿಕಾರಿಗಳು ಮತಗಟ್ಟೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ನೀಡುವ ಸಂಭಾವನೆ ಬಗ್ಗೆ ಸುತ್ತೋಲೆಯನ್ನು ನೀಡಲಾಗಿತ್ತು.

ಸದರಿ ಉಲ್ಲೇಖದಲ್ಲಿನ ಸುತ್ತೋಲೆಯನ್ನು ಹೊರಡಿಸಿ ಈಗಾಗಲೇ 12 ವರ್ಷಗಳು ಗತಿಸಿರುವುದರಿಂದ ಹಣದ ಮೌಲ್ಯದಲ್ಲಿ ವ್ಯತ್ಯಾಸ ಹಾಗೂ ಒಂದೇ ಸಮನೆ ಏರುತ್ತಿರುವ ಅಗತ್ಯ ವಸ್ತುಗಳ ಬೆಲೆಗಳ ಕಾರಣ ಚುನಾವಣಾಧಿಕಾರಿಗಳ ಹಾಗೂ ಮತಗಟ್ಟೆ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ನೀಡಬೇಕಾದ ಸಂಭಾವನೆಯನ್ನು ಈ ಕೆಳಕಂಡಂತೆ ಪರಿಷ್ಕರಿಸಿ ಆದೇಶಿಸಲಾಗಿದೆ.

| ಕ್ರ. ಸಂ. | ವರ್ಗವಾರು ಸಂಘಗಳು | ಗರಿಷ್ಠ ಸಂಭಾವನೆ ಚುನಾವಣಾಧಿ–ಕಾರಿಗಳಿಗೆ | ಗರಿಷ್ಠ ಸಂಭಾವನೆ ಮತಗಟ್ಟೆ ಅಧಿಕಾರಿ/ ಸಿಬಂದಿಗಳಿಗೆ |
|---|---|---|---|
| 1 | 2 | 3 | 4 |
| 1 | ಪ್ರಾಥಮಿಕ ಸಹಕಾರ ಸಂಘಗಳು | 1000-00 | 250-00 |
| 2 | ತಾಲ್ಲೂಕ್ ಮಟ್ಟಕ್ಕಿಂತಲೂ ಕಡಿಮೆ ಮತ್ತು ತಾಲ್ಲೂಕ್ ಮಟ್ಟದ ಕಾರ್ಯವ್ಯಾಪ್ತಿಯನ್ನು ಹೊಂದಿರುವ ಸಹಕಾರ ಸಂಘಗಳು | 1250-00 | 300-00 |
| 3 | ತಾಲ್ಲೂಕು ಮಟ್ಟ ಮೀರಿ ಜಿಲ್ಲಾ ಮಟ್ಟವರೆಗಿನ ಸಹಕಾರ ಸಂಘಗಳು | 1500-00 | 350-00 |
| 4 | ಜಿಲ್ಲಾ ಮಟ್ಟ ಮೀರಿ ರಾಜ್ಯ ಮಟ್ಟಕ್ಕಿಂತಲೂ ಕಡಿಮೆ ಕಾರ್ಯವ್ಯಾಪ್ತಿಯನ್ನು ಹೊಂದಿರುವ ಸಹಕಾರ ಸಂಘಗಳು | 1750-00 | 400-00 |
| 5 | ರಾಜ್ಯಮಟ್ಟದ ಸಹಕಾರ ಸಂಘಗಳು | 2000-00 | 500-00 |

ಈ ಮೇಲ್ಕಂಡ ಸಂಭಾವನೆಯನ್ನು ಸಂಬಂಧಪಟ್ಟ ಸಹಕಾರ ಸಂಘಗಳು ನೀಡತಕ್ಕದ್ದು. ಇದಲ್ಲದೆ ಚುನಾವಣಾಧಿಕಾರಿಗಳು, ಮತಗಟ್ಟೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಪ್ರವಾಸ ಭತ್ಯೆ ಮತ್ತು ದಿನಭತ್ಯೆಕ್ಕೆ ಅರ್ಹರಾಗಿರುತ್ತಾರೆ. ಸದರಿ ಪ್ರವಾಸ ಹಾಗೂ ದಿನ ಭತ್ಯೆಯನ್ನು ಸಂಬಂಧಿಸಿದ ಸಂಘವೇ ನೀಡತಕ್ಕದ್ದು.

ಈ ಸುತ್ತೋಲೆಯ ಆದೇಶದಲ್ಲಿ ನಿಗದಿಗೊಳಿಸಿರುವ ಸಂಭಾವನೆಯು ಈ ಕೂಡಲೇ ಜಾರಿಗೆ ಬರತಕ್ಕದ್ದು.

(ಡಾ: ಹೆಚ್.ವಿ.ಪಾರ್ಶ್ವನಾಥ್)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

**<u>ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560 052.</u>**

ಸಂಖ್ಯೆ: ಆರ್‌ಎಸ್‌ಆರ್/89/ಎಕ್ಸ್‌ಎಂಸಿ/99–2000. ದಿನಾಂಕ: 03–1–2000.

**<u>ಸುತ್ತೋಲೆ ಸಂಖ್ಯೆ–146</u>**

ವಿಷಯ:– ಸಹಕಾರ ಸಂಘಗಳ ನೌಕರರಿಗೆ ಅವರ ಭಾವಚಿತ್ರವನ್ನು ಹೊಂದಿರುವ ಗುರುತಿನ ಚೀಟಿಗಳನ್ನು ನೀಡುವ ಬಗ್ಗೆ.

ಉಲ್ಲೇಖ:– ಮಾನ್ಯ ಸಹಕಾರ ಸಚಿವರು ದಿನಾಂಕ 18–12–1999 ರಂದು ತುಮಕೂರಿನಲ್ಲಿ ನಡೆಸಿದ ಇಲಾಖಾಧಿಕಾರಿಗಳ ಸಭೆಯ ನಡವಳಿಗಳು.

––

ಸಹಕಾರ ಸಂಘಗಳ ನೌಕರರು ತಮ್ಮ ಸಂಘದಲ್ಲಿ ಕಾರ್ಯನಿರತರಾಗಿದ್ದಾಗ ಮತ್ತು ಸಂಘದ ಕಾರ್ಯಗಳ ನಿಮಿತ್ತ ಸರ್ಕಾರಿ ಇಲಾಖೆಗಳಿಗೆ ಹಾಗೂ ಸಾಲ ವಸೂಲಾತಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸಂಘದ ಸದಸ್ಯರನ್ನು ಭೇಟಿ ಮಾಡುವ ಸಂದರ್ಭಗಳಲ್ಲಿ ಈ ನೌಕರರನ್ನು ತಕ್ಷಣ ಗುರುತಿಸಲು ಅನುಕೂಲವಾಗುವಂತೆ ಸಂಘದ ನೌಕರರುಗಳ ಭಾವಚಿತ್ರವನ್ನು ಹೊಂದಿರುವ ಗುರುತಿನ ಚೀಟಿಗಳನ್ನು ಹೊಂದುವುದು ಅವಶ್ಯಕವಾಗಿದೆ. ಆದಕಾರಣ ಈ ಕೆಳಕಂಡ ಸಹಕಾರ ಸಂಘಗಳು ತಕ್ಷಣ ತಮ್ಮ ತಮ್ಮ ನೌಕರರಿಗೆ ಇತ್ತೀಚಿನ ಭಾವಚಿತ್ರ ಹೊಂದಿದ ಗುರುತಿನ ಚೀಟಿಯನ್ನು ನೀಡುವ ವ್ಯವಸ್ಥೆ ಮಾಡಲು ಸೂಚಿಸಿದೆ.

1) ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿ.,
2) ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ.,
3) ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ.,
4) ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ ನಿ.,
5) ರಾಜ್ಯದ ಎಲ್ಲಾ ಪಟ್ಟಣ ಸಹಕಾರಿ ಬ್ಯಾಂಕುಗಳು.
6) ಎಲ್ಲಾ ಹಾಲು ಉತ್ಪಾದಕರ ಒಕ್ಕೂಟಗಳು.
7) ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳ ನಿ.,
8) ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು.
9) ಎಲ್ಲಾ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು.

ಈ ಮೇಲಿನ ಸಹಕಾರ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಾಹಕರು ತಕ್ಷಣ ಕ್ರಮ ಕೈಗೊಂಡು ತಮ್ಮ ನೌಕರರಿಗೆ ಸಂಘದ ವಿಳಾಸ ಮುದ್ರಿಸಿದ ಚೀಟಿಗೆ ಅವರ ಬಾವಚಿತ್ರ, ಹೆಸರು ಪದನಾಮ ನಮೂದಿಸಿ ತಮ್ಮ ಸಹಿಯೊಂದಿಗೆ ಸಂಘದ ಮೊಹರು ಹಾಕಿದ ಗುರುತಿನ ಚೀಟಿಯನ್ನು ನೀಡಿ ಈ ಚೀಟಿಯನ್ನು ಪ್ರತಿಯೊಬ್ಬ ನೌಕರರು ಕಛೇರಿ ವೇಳೆಯಲ್ಲಿ ಹಾಗೂ ಸಂಘದ ಕಾರ್ಯಗಳಿಗೆ ಇತರೆ ಸ್ಥಳಗಳಿಗೆ ಹೋದಾಗ ಕಡ್ಡಾಯವಾಗಿ ಪ್ರದರ್ಶಿಸಲು ಏರ್ಪಾಡು ಮಾಡಲು ಸೂಚಿಸಲಾಗಿದೆ.

(ಸಹಿ)
(ತಪನ್ ಸೇನಾಪತಿ)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

**<u>ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560 052.</u>**

ಸಂಖ್ಯೆ: ಆರ್‌ಎಸ್‌ಆರ್/91/ಎಕ್ಸ್‌ಎಂಸಿ/99–2000. ದಿನಾಂಕ: 13–1–2000.

**<u>ಸುತ್ತೋಲೆ ಸಂಖ್ಯೆ–147</u>**

ವಿಷಯ:– ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 103 ರ ಆದೇಶ–
ವನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960
ನಿಯಮ 47 ರ ಪ್ರಕಾರ ಜಾರಿಗೊಳಿಸುವ ಕುರಿತು.

––

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 103 ರಲ್ಲಿ ಮಾಡಿದ ಆದೇಶವನ್ನು ಜಾರಿ ಮಾಡುವ ಕುರಿತು ಅನೇಕ ಪತ್ರ ವ್ಯವಹಾರಗಳನ್ನು ಈ ಕಛೇರಿಗೆ ಮಾಡಿ, ಸ್ಪಷ್ಟೀಕರಣ ಕೇಳಲಾಗುತ್ತಿದೆ. ಸದರಿ ಆದೇಶವನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ 1960, ನಿಯಮ 47 ರ ಪ್ರಕಾರ ಜಾರಿಗೊಳಿಸಬೇಕಾಗುತ್ತದೆ. ಅಂದರೆ ಜಾರಿಗೊಳಿಸಬೇಕಾದ ಆಸ್ತಿಗಳನ್ನು ಅನುಸರಿಸಿ ನಿಯಮಗಳು 36, 37 ಮತ್ತು 38 ರ ಪ್ರಕಾರ ಕ್ರಮವಿಡಬೇಕಾಗುತ್ತದೆ.

" There must be first an order of attachment and secondly in execution of that order formalities prescribed therein have to be complied with i.e., there should be a prohibitory order restraining the person from in any way alienating the property sought to be attached. The order of attachment will have to be proclaimed by beat of drum or other customary mode. The order will have to be affixed on conspicuous part of the property and there upon on the Notice Board of the Court. For an order of attachment to become effective these conditions which are laid down have to be complied with".

"When several properties are sought to be attached in pursuance of an order of attachment, there must be proof of affixture on every one of the properties. An order of attachment affixed only on one property cannot be deemed to be effective attachment of the other properties.

The essence of an order for attachment is to prohibit the judgement debtor from transferring the property and until such a prohibition is proclaimed and made known in the way provided by the rule it cannot be said to have come into operation".

ಮೇಲಿನ ಅಂಶಗಳ ಸಾರಾಂಶವೇನೆಂದರೆ ಕಲಂ 103 ರ ಆದೇಶ ಮಾಡಿದರಷ್ಟೇ ಸಾಲದು ಅದನ್ನು ಜಾರಿ ಮಾಡಿರುವುದಕ್ಕೆ ಸಂಬಂಧಿಸಿದಂತೆ ಆಧಾರ ಬೇಕಾಗುತ್ತದೆ. ಈ ಆದೇಶ ಜಾರಿಯಾಗಿದೆಯೆಂದು ಕೇಳುವ ಕಕ್ಷಿದಾರರು ಈ ಮೇಲೆ ವಿವರಿಸಿದ ನಿಯಮಗಳನ್ನು ಅನುಸರಿಸಿ ಆದೇಶವನ್ನು ಜಾರಿ ಮಾಡಿದ್ದಕ್ಕೆ ಆಧಾರ ನೀಡಬೇಕಾಗುತ್ತದೆ.

ಈ ಮೇಲಿನಂತೆ ಕಲಂ 103 ರ ಆದೇಶಗಳನ್ನು ಕ್ರಮವಿಡಲು ಸೂಚಿಸಲಾಗಿದೆ.

(ಸಹಿ)
(ತಪನ್ ಸೇನಾಪತಿ)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560 052.**

ಸಂಖ್ಯೆ: ಆರ್‌ಎಸ್‌ಆರ್/94/ಎಕ್ಸ್‌ಎಂಸಿ/99–2000. ದಿನಾಂಕ: 14–1–2000.

**ಸುತ್ತೋಲೆ ಸಂಖ್ಯೆ–148**

ವಿಷಯ:– ಹಣ ದುರುಪಯೋಗ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಕುರಿತು.

ಉಲ್ಲೇಖ:– 1) ಕ್ರಿಮಿನಲ್ ಅಪೀಲ್ ಸಂಖ್ಯೆ 710/99 ಕ್ಕೆ ಗೌರವ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪು ದಿನಾಂಕ 29–9–1999.

2) ಸರ್ಕಾರದ ಅ.ಸ.ಪ. ಸಂಖ್ಯೆ: ಸಿಎಂಡಬ್ಲ್ಯೂ/351/ಸಿಡಬ್ಲ್ಯೂಪಿ/99, ದಿನಾಂಕ 20–12–1999.

––

ಉಲ್ಲೇಖ(1) ರ ಕ್ರಿಮಿನಲ್ ಅಪೀಲ್ ಸಂಖ್ಯೆ 719/99 ಕ್ಕೆ ಗೌರವ ಉಚ್ಚ ನ್ಯಾಯಾಲಯವು ನೀಡಿರುವ ಮಹತ್ತರವಾದ ತೀರ್ಪಿನ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.

ಗೌರವ ಉಚ್ಚ ನ್ಯಾಯಾಲಯದ ಆದೇಶದಲ್ಲಿ ಸಹಕಾರ ಸಂಘಗಳ ಹಣ ದುರುಪಯೋಗ ಪ್ರಕರಣಗಳಲ್ಲಿ ತೆಗೆದುಕೊಳ್ಳುವ ಕ್ರಮಗಳ ಬಗ್ಗೆ ನಿರ್ವಹಿಸುವ ತಪ್ಪು ಕಾರ್ಯ ವಿಧಾನಗಳಿಂದ ನಿಜವಾದ ಅಪರಾಧಿಗಳು ತಪ್ಪಿಸಿಕೊಳ್ಳುವ ಸಂದರ್ಭಗಳನ್ನು ಗಂಭೀರವಾಗಿ ಅವಲೋಕಿಸಲಾಗಿದೆ. ಈ ತೀರ್ಪನ್ನು ಬಹಳ ಎಚ್ಚರಿಕೆಯಿಂದ ಗಮನಿಸಿ ಹಣ ದುರುಪಯೋಗ ಪ್ರಕರಣಗಳನ್ನು ನಿರ್ವಹಿಸಲು ಸೂಚಿಸಿದೆ. ಇಂತಹ ಪ್ರಕರಣಗಳಲ್ಲಿ ಹೆಚ್ಚಿನದಾಗಿ ಸಹಕಾರ ಸಂಘಗಳ ಪದಾಧಿಕಾರಿಗಳ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಪಾತ್ರ ಹೆಚ್ಚಾಗಿದ್ದು ಇವರು ಜವಾಬ್ದಾರರಾಗಿರುತ್ತಾರೆ. ಗೌರವ ಉಚ್ಚ ನ್ಯಾಯಾಲಯದಲ್ಲಿ ಆದೇಶದಲ್ಲಿ ವಿವರಿಸಿರುವಂತೆ ಒಂದು ಸಣ್ಣ ಸಹಕಾರ ಸಂಘದಲ್ಲಿ ರೂ.91,977–00 ಗಳ ದೊಡ್ಡ ಮೊತ್ತದ ದಾಸ್ತಾನು ದುರುಪಯೋಗವಾಗಿದ್ದು, ಈ ದುರುಪಯೋಗದ ಬಗ್ಗೆ ಲೆಕ್ಕಪತ್ರಗಳ ನಿರ್ವಹಣೆಯ ಜವಾಬ್ದಾರಿ ಹೊಂದಿರುವ ಸಂಘದ ಕಾರ್ಯದರ್ಶಿ ಹಾಗೂ ಸಂಘದ ಅಧ್ಯಕ್ಷರು ಇದನ್ನು ಗಮನಿಸದಿರುವ ಬಗ್ಗೆ ಸಂಶಯಹಿಸಲಾಗಿದೆ.

ಈ ಮೇಲಿನ ಗೌರವ ಉಚ್ಚ ನ್ಯಾಯಾಲಯ ಆದೇಶದ ಹಿನ್ನಲೆಯಲ್ಲಿ ಸಹಕಾರ ಸಂಘಗಳ ಹಣ ದುರುಪಯೋಗ ಪ್ರಕರಣಗಳನ್ನು ನಿರ್ವಹಿಸುವಾಗ ಬಹಳ ಎಚ್ಚರಿಕೆಯಿಂದ ಗಮನಿಸಿ, ಸಂಘದ ಹಿರಿಯ ಅಧಿಕಾರಿಗಳು ಮತ್ತು ಪದಾಧಿಕಾರಿಗಳ ಜವಾಬ್ದಾರಿಯನ್ನು ನಿರ್ಧರಿಸಿ ಕ್ರಿಮಿನಲ್ ಮತ್ತು ಸಿವಿಲ್ ದಾವೆಗಳನ್ನು ಹೂಡಲು ಕ್ರಮವಹಿಸುವಂತೆ ಸೂಚಿಸಲಾಗಿದೆ.

(ಸಹಿ)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052.**

ಸಂಖ್ಯೆ: ಆರ್‌ಎಸ್‌ಆರ್/21/ಎಕ್ಸ್‌ಎಂಸಿ/2000-01. ದಿನಾಂಕ: 21-6-2000.

**ಸುತ್ತೋಲೆ ಸಂಖ್ಯೆ-160**

ವಿಷಯ:- ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಾಹಕರು ಹಾಗೂ ಇತರೆ ನೌಕರರು ಸಾಮಾನ್ಯ ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿರುವ ಬಗ್ಗೆ.

ಉಲ್ಲೇಖ:- ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಎಂಡಬ್ಲ್ಯೂ/83/ಸಿಎಲ್‌ಎಂ/95, ದಿನಾಂಕ 26-11-1996.

--

ಉಲ್ಲೇಖದ ಸರ್ಕಾರದ ಅಧಿಸೂಚನೆ ದಿನಾಂಕ 26-11-1996 ರಲ್ಲಿ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ 1960 ರ ನಿಯಮ 18(8) ಸೇರಿಸಿ ಸಹಕಾರ ಸಂಘಗಳ ನೌಕರರು ಚುನಾವಣೆಗಳಲ್ಲಿ ಭಾಗವಹಿಸುವುದು ಮತ್ತು ಸ್ಪರ್ಧಿಸುವುದನ್ನು ನಿಷೇಧಿಸಿರುತ್ತದೆ. ಯಾವುದೇ ರಾಜಕೀಯ ಪಕ್ಷದ ಸದಸ್ಯ ಅಥವಾ ರಾಜಕೀಯ ಪಕ್ಷದೊಂದಿಗೆ ಸಂಬಂಧಿಸಿದ ಅಥವಾ ರಾಜಕೀಯದಲ್ಲಿ ಭಾಗವಹಿಸುವ ಯಾವುದೇ ಸಂಸ್ಥೆಯೊಂದಿಗೆ ಸಂಬಂಧ ಅಥವಾ ಭಾಗವಹಿಸುವ ಅಥವಾ ಯಾವುದೇ ರಾಜಕೀಯ ಚಳುವಳಿ ಅಥವಾ ಕಾರ್ಯಾಚರಣೆಯಲ್ಲಿ ಭಾಗವಹಿಸಕೂಡದೆಂದೂ, ಪಾರ್ಲಿಮೆಂಟ್ ಅಥವಾ ವಿಧಾನಮಂಡಳ ಅಥವಾ ಸ್ಥಳೀಯ ಸಂಸ್ಥೆಗಳ ಅಥವಾ ಸಹಕಾರ ಸಂಘಗಳ ಕಾರ್ಯಕಾರಿ ಮಂಡಳಿ ಚುನಾವಣೆ ಅಥವಾ ಪದಾಧಿಕಾರಿಗಳ ಚುನಾವಣೆಯಲ್ಲಿ ನೌಕರರು ಯಾವ ವಿಧವಾದ ಪ್ರಚಾರ ಅಥವಾ ಪ್ರಭಾವ ಬೀರುವುದನ್ನು ನಿಷೇಧಿಸಲಾಗಿದೆ. ಈ ರೀತಿ ನಿಯಮವನ್ನು ಉಲ್ಲಂಘಿಸಿದ ನೌಕರರು ಶಿಸ್ತು ಕ್ರಮಕ್ಕೊಳಗಾಗುತ್ತಾರೆ. ಇಂತಹ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಅಧಿಕಾರ ನಿಯಮ 18(10) ಪ್ರಕಾರ ಆಯಾ ಸಂಘದ ಆಡಳಿತ ಮಂಡಳಿಗೆ ಇರುತ್ತದೆ. ಆದರೂ ಕೆಲವು ಸಹಕಾರ ಸಂಘಗಳ ಸಿಬ್ಬಂದಿ ವರ್ಗದವರು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ. ಈ ಹಿನ್ನಲೆಯಲ್ಲಿ ನಿಯಮ 18(8) ನ್ನು ಉಲ್ಲಂಘಿಸುವವರ ವಿರುದ್ಧ ಶಿಸ್ತು ಕ್ರಮವಿಡಲು ನಿಮ್ಮ ಕಾರ್ಯವ್ಯಾಪ್ತಿಯ ಎಲ್ಲಾ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಸೂಚನೆ ನೀಡುವಂತೆ ಈ ಮೂಲಕ ಸೂಚಿಸಲಾಗಿದೆ.

(ಸಹಿ)

(ಸಿ.ಚಿಕ್ಕಣ್ಣ)

ಸಹಕಾರ ಸಂಘಗಳ ನಿಬಂಧಕರು,

ಕರ್ನಾಟಕ ರಾಜ್ಯ, ಬೆಂಗಳೂರು.

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560 052.**

ಸಂಖ್ಯೆ: ಆರ್‌ಎಸ್‌ಆರ್/115/ಎಕ್ಸ್‌ಎಂಸಿ/2001–02. ದಿನಾಂಕ: 30–11–2001.

**ಸುತ್ತೋಲೆ ಸಂಖ್ಯೆ–171**

ವಿಷಯ:– ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರಡಿಯಲ್ಲಿ ವಿಚಾರಣೆಗೆ ಆದೇಶಿಸಿದ್ದು, ವಿಚಾರಣೆಗಳು 1 ವರ್ಷಕ್ಕೂ ಮೇಲ್ಪಟ್ಟು ಬಾಕಿ ಇರುವ ಕುರಿತು.

ಉಲ್ಲೇಖ:– 1) ಸರ್ಕಾರದ ಪತ್ರ ಸಂಖ್ಯೆ: ಸಿಎಂಡಬ್ಲ್ಯೂ/44/ಸಿಎಲ್‌ಎಂ/2001, ದಿದನಾಂಕ 23–10–2001.

2) ಕರ್ನಾಟಕ ಸಹಕಾರ ಸಂಘಗಳ (2ನೇ ತಿದ್ದುಪಡಿ) ಕಾಯ್ದೆ 2000 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ/48/ಸಿಎಲ್‌ಎಂ/2001, ದಿನಾಂಕ 5–9–2001.

––

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರಡಿಯಲ್ಲಿ ವಿಚಾರಣೆಗೆ ಆದೇಶಿಸಿದ ಅನೇಕ ವಿಚಾರಣೆಗಳು 1 ವರ್ಷಕ್ಕೂ ಮೇಲ್ಪಟ್ಟು ಬಾಕಿ ಇದ್ದದ್ದು ನಿಬಂಧಕರ ಗಮನಕ್ಕೆ ಬಂದಿದ್ದು, ಈ ಬಗ್ಗೆ ಸರ್ಕಾರದ ಅಭಿಪ್ರಾಯ ಕೇಳಲಾಗಿ, ಸರ್ಕಾರವು ಉಲ್ಲೇಖ(1) ರಂತೆ ಕಾನೂನು ಇಲಾಖೆಯ ಅಭಿಪ್ರಾಯ ಪಡೆದಿದ್ದು, ಅದರ ಉದ್ಧೃತ ಭಾಗವು ಈ ಕೆಳಕಂಡಂತೆ ಇರುತ್ತದೆ.

“ Section 64(2A) of the Karnataka Co-operative Societies Act, 1959 requires that the enquiry shall be completed within a period of six months. If the same could not be completed, the provision also enables the Registrar to grant another six months time to complete the enquiry.

The provisions of the Act are silent as to what should happen to the enquiry if it is not completed within the stipulated period of one year. The intention of Section 64(2A) of the Act is only to persuade the concerned to complete the enquiry within the period stipulated therein. In case, it is not completed for one reason of the other, it may not mean that the enquiry will abate. The authorities will have to complete the same”.

ಕಾನೂನು ಇಲಾಖೆಯು ಮೇಲೆ ವಿವರಿಸಿದಂತೆ ನೀಡಿದ್ದ ಅಭಿಪ್ರಾಯದ ಮೇರೆಗೆ ಕ್ರಮವನ್ನು ತೆಗೆದುಕೊಳ್ಳಲು ಸರ್ಕಾರ ತಿಳಿಸಿದಂತೆ, 1 ವರ್ಷಕ್ಕೂ ಮೇಲ್ಪಟ್ಟು ಇರುವ ಎಲ್ಲಾ ವಿಚಾರಣೆಗಳನ್ನು ಸಂಬಂಧಪಟ್ಟ ವಿಚಾರಣಾಧಿಕಾರಿಗಳು ತಕ್ಷಣವೇ ಪೂರ್ಣಗೊಳಿಸಿ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಲು ತಿಳಿಸಲಾಗಿದೆ. ಉಲ್ಲೇಖ(2) ತಿದ್ದುಪಡಿ ಕಾಯ್ದೆಯಂತೆ ನಿಬಂಧಕರ ಶಿಫಾರಸ್ಸಿನ ಮೇಲೆ ಸರ್ಕಾರವು ಆರು ತಿಂಗಳ ಮತ್ತಷ್ಟು ಅವಧಿಗೆ ವಿಸ್ತರಿಸಬಹುದಾಗಿದೆ. ಇನ್ನು ಮುಂದೆ ವಿಚಾರಣೆಗಳು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿ ವರದಿಯನ್ನು ಸಲ್ಲಿಸುವಂತೆ ತಿಳಿಸುತ್ತಾ, ಈ ಬಗ್ಗೆ ಯಾವುದೇ ವಿಚಾರಣಾಧಿಕಾರಿಗಳು ವಿಚಾರಣೆಯನ್ನು

ಪೂರ್ಣಗೊಳಿಸದೇ ಇದ್ದಲ್ಲಿ ಅಂತಹವರು ತಮ್ಮ ಕರ್ತವ್ಯದಲ್ಲಿ ವಿಫಲರಾಗಿದ್ದಾರೆಂದು ಪರಿಗಣಿಸಿ, ಅವರ ರಹಸ್ಯ ವರದಿಗಳಲ್ಲಿ ನಮೂದಿಸುವಂತೆ ನಿರ್ದೇಶಿಸಲಾಗಿದೆ.

ಒಂದು ವರ್ಷದ ನಂತರ ವರದಿ ಬಂದಿರುವ ಪ್ರಕರಣಗಳಲ್ಲಿ ವಿಚಾರಣಾ ವರದಿಗಳ ಮೇಲೆ ತಕ್ಷಣ ಸೂಕ್ತ ಕ್ರಮ ಜರುಗಿಸುವಂತೆ ವಿಚಾರಣೆಗೆ ಆದೇಶಿಸಿದ ಅಧಿಕಾರಿಗಳಿಗೆ ತಿಳಿಸಲಾಗಿದೆ.

ಕೆಲವು ವಿಚಾರಣೆಗಳು ಅನೇಕ ವರ್ಷಗಳ ಹಿಂದೆ ಆದೇಶಿಸಲಾಗಿದ್ದು, ಈವತ್ತಿನವರೆಗೆ ಒಂದಲ್ಲ ಒಂದು ಕಾರಣಕ್ಕೆ ವಿಚಾರಣೆಯನ್ನು ಪೂರ್ಣಗೊಳಿಸದೇ ಇದ್ದು, ಇಂತಹ ವಿಚಾರಣೆಗಳಲ್ಲಿ ಅಡಕವಾಗಿರುವ ಅಂಶಗಳು ಪ್ರಸ್ತುತ ಸಮಯದಲ್ಲಿ ವಿಚಾರಣೆ ಮಾಡುವುದು ಯೋಗ್ಯವೇ ಎಂಬುದನ್ನು ವಿಚಾರಣೆಗೆ ಆದೇಶಿಸಿದ ಅಧಿಕಾರಿಗಳು ವಿಮರ್ಶಿಸಿ ಯಾವುದಾದರೂ ಅಂಶದ ಬಗ್ಗೆ ಈಗಾಗಲೇ ಕ್ರಮ ಜರುಗಿಸಿದ್ದಲ್ಲಿ ಅಥವಾ ವಿಚಾರಣೆಗೆ ಯೋಗ್ಯವಿಲ್ಲವೆಂದು ಕಂಡುಬಂದಲ್ಲಿ ಅಂತಹ ಅಂಶ ಕೈಬಿಡುವುದರ ಬಗ್ಗೆ ಮರು ಪರಿಶೀಲಿಸಲು ಸೂಕ್ತ ಪ್ರಸ್ತಾವನೆಯನ್ನು ವಿಚಾರಣೆಗೆ ಆದೇಶಿಸಿದ ಅಧಿಕಾರಿಗಳು ತಕ್ಷಣದ ಮೇಲಾಧಿಕಾರಿಗಳಿಗೆ ಸಲ್ಲಿಸಲು ತಿಳಿಸಿದೆ.

ಇನ್ನು ಮುಂದೆ ಕಲಂ 64 ರಡಿ ಆದೇಶಿಸಿದ ವಿಚಾರಣೆಗಳು ಆದೇಶದಲ್ಲಿ ನಮೂದಿಸಿದ ಅವಧಿಯೊಳಗೆ ವಿಚಾರಣೆಯನ್ನು ಮಾಡಿ ವರದಿಯನ್ನು ಸಲ್ಲಿಸದೇ ಇರುವಂತಹ ಅಧಿಕಾರಿಗಳ ಹೆಸರುಗಳನ್ನು ಈ ಕಾರ್ಯಾಲಯಕ್ಕೆ ಅರೆ ಸರ್ಕಾರಿ ಪತ್ರದ ಮೂಲಕ ಶಿಸ್ತಿನ ಕ್ರಮ ಕೈಗೊಳ್ಳಲು ಸಲ್ಲಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡಲಾಗುವುದು.

(ಸಹಿ)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

# <u>ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560 052.</u>

ಸಂಖ್ಯೆ: ಆರ್‌ಎಸ್‌ಆರ್/116/ಎಕ್ಸ್‌ಎಂಎ/2005–06. ದಿನಾಂಕ: 19–9–2005.

## <u>ಸುತ್ತೋಲೆ ಸಂಖ್ಯೆ–196</u>

<u>ಇವರಿಗೆ:–</u>

1) ಕೇಂದ್ರ ಕಛೇರಿಯ ಎಲ್ಲಾ ಕಾರ್ಯ ಮುಖ್ಯಸ್ಥರುಗಳಿಗೆ.
2) ಆಯುಕ್ತರು, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರು, ಬೆಂಗಳೂರು.
3) ಜವಳಿ ಆಯುಕ್ತರು ಹಾಗೂ ಕೈಮಗ್ಗ ಜವಳಿ ನಿರ್ದೇಶಕರು, ಬೆಂಗಳೂರು.
4) ಎಲ್ಲಾ ಪ್ರಾಂತಗಳ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು,
5) ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರು.
6) ಎಲ್ಲಾ ಉಪ ವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರು.
7) ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರು, ಶಂಕರಮಠ ರಸ್ತೆ, ಬೆಂಗಳೂರು.

ವಿಷಯ:– ಆಡಿಟ್ ವರದಿಗಳ ಮೇಲೆ ಅನುಸರಣಾ ಕ್ರಮವಿಡುವ ಕುರಿತು.

ಉಲ್ಲೇಖ:– ಸರ್ಕಾರದ ಪತ್ರ ಸಂ.ಸಿಒ/197/ಸಿಎಲ್‌ಎಂ/2005, ದಿ: 12–7–2005.

––

ದಿನಾಂಕ 05–07–2005 ರಂದು ವಿಧಾನ ಪರಿಷತ್ತಿನಲ್ಲಿ ಅನೇಕ ಸದಸ್ಯರು ಆಡಿಟ್ ವರದಿಗಳಲ್ಲಿ ನಮೂದಿಸಿದ ಲೋಪದೋಷಗಳನ್ನು ಸರಿಪಡಿಸಲು ಅಗತ್ಯ ಕ್ರಮ ತೆಗೆದುಕೊಳ್ಳುತ್ತಿಲ್ಲವೆಂದೂ, ಪರಿಣಾಮವಾಗಿ ತಪ್ಪಿತಸ್ಥರ ಮೇಲೆ ಯಾವುದೇ ರೀತಿಯ ಕ್ರಮವಾಗುತ್ತಿಲ್ಲವೆಂದೂ ತಿಳಿಸಿ, ಆಡಿಟ್ ವರದಿಗಳು ಬಂದ ಕೂಡಲೇ ಅವುಗಳನ್ನು ವಿಮರ್ಶೆ ಮಾಡಿ, ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕೆಂದೂ ತಿಳಿಸಿದ್ದು, ಮಾನ್ಯ ಸಹಕಾರ ಸಚಿವರು ಆಡಿಟ್ ವರದಿಗಳ ಮೇಲೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದಾಗಿ ಭರವಸೆ ನೀಡಿರುವ ಹಿನ್ನಲೆಯಲ್ಲಿ ಎಲ್ಲಾ ಸಹಕಾರ ಸಂಘಗಳ ಆಡಿಟ್ ವರದಿಗಳನ್ನು ಸಂಬಂಧಪಟ್ಟ ಎಲ್ಲಾ ಸಹಾಯಕ ನಿಬಂಧಕರು/ಉಪ ನಿಬಂಧಕರು/ಜಂಟಿ ನಿಬಂಧಕರು/ಕೇಂದ್ರ ಕಛೇರಿ ವಿಭಾಗದ ಮುಖ್ಯಸ್ಥರು ವರದಿ ಸ್ವೀಕೃತವಾದ ಒಂದು ತಿಂಗಳ ಒಳಗಾಗಿ ವಿಮರ್ಶೆ ಮಾಡಿ, ಹಣ ದುರುಪಯೋಗ ಇತ್ಯಾದಿ ಅವ್ಯವಹಾರಗಳು ಕಂಡುಬಂದಲ್ಲಿ ಸಿವಿಲ್ ಕ್ರಿಮಿನಲ್ ಮತ್ತು ಶಿಸ್ತಿನ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚಿಸಿದೆ. ಅಧಿಕಾರೇತರರು ಇಂತಹ ಪ್ರಕರಣಗಳಲ್ಲಿ ಭಾಗಿಗಳಾಗಿದ್ದಲ್ಲಿ ಅವರುಗಳ ಮೇಲೆಯೂ ಸಹ ಸಹಕಾರ ಸಂಘಗಳ ಅಧಿನಿಯಮ 1959 ರ ಕಲಂ 21(ಸಿ), ಕಲಂ 30(1) ರಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳತಕ್ಕದ್ದು.

ಇದರ ಜೊತೆಗೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ನಬಾರ್ಡ್ ಪರಿವೀಕ್ಷಣೆ ವರದಿಗಳನ್ನು/ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದಂತೆ ಭಾರತೀಯ ರಿಜರ್ವ್ ಬ್ಯಾಂಕ್ ಪರಿವೀಕ್ಷಣಾ ವರದಿಗಳನ್ನು 15 ದಿನಗಳೊಳಗಾಗಿ ವಿಮರ್ಶಿಸಿ, ನಬಾರ್ಡ್ ನಿರ್ದೇಶನಗಳ ಹಾಗೂ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 ರ ಉಲ್ಲಂಘನೆಗಳ ಮೇಲೆ ತಕ್ಷಣ ಕಾನೂನು ಕ್ರಮವಿಡುವುದು ಸಕ್ಷಮ ಪ್ರಾಧಿಕಾರಿಗಳಾದ ಸಹಾಯಕ ನಿಬಂಧಕರು/ಉಪ

ನಿಬಂಧಕರು/ಜಂಟಿ ನಿಬಂಧಕರು/ಕೇಂದ್ರ ಕಛೇರಿ ವಿಭಾಗಗಳ ಮುಖ್ಯಸ್ಥರುಗಳ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ. ತಕ್ಷಣದ ಕ್ರಮಗಳಿಂದ ಸಹಕಾರ ಸಂಸ್ಥೆಗಳಲ್ಲಿ ಆರ್ಥಿಕ ಶಿಸ್ತು ತರಲು ಸಹಾಯಕವಾಗುವುದು.

ಕ್ರಮ ಕೈಗೊಂಡಿರುವ ಬಗ್ಗೆ ಪ್ರತಿ ತಿಂಗಳ 10ನೇ ತಾರೀಖಿನೊಳಗೆ ವಿವರಗಳೊಂದಿಗೆ ವರದಿ ಸಲ್ಲಿಸಲು ಸೂಚಿಸಿದೆ.

(ಸಹಿ)
(ಕೆ.ಹೆಚ್.ಗೋಪಾಲಕೃಷ್ಣೇಗೌಡ)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

**OFFICE OF THE REGISTRAR OF COOPERATIVE SOCIETIES IN KARNATAKA, NO.1, ALI ASKER ROAD, BANGALORE-52.**

No. RSR/156/XMC/96-97. Date: 04-1-1997.

**CIRCULAR NO.82**

Sub: Celebration of Silver/Golden/Diamond Platinum Jubilee functions by the Co.operative Societies in the State-reg.

Ref:- 1) This office circular No.RSR/134/XMA/91-92, dt. 16-07-1991.

2) Govt. Letter No. CMW/455/CLM/96, dt. 16-11-1996.

--

In this office Circular cited at reference (1), directions were issued indicating the manner of incurring expenditure towards celebration of Silver/Golden/ Diamond/Platinum Jubilee by Co.operative Institutions. It was, interlaid, directed in the said Circular that any expenditure in excess of Rs.10,000/- towards Jubilee Celebrations shall have to be incurred only with the prior approval of the Government.

02. Now Government have informed vide reference at (2) above that, prior approval of Government is not required for the Cooperative Societies for celebrating Jubilee functions out of the funds earmarked for that purpose and or out of the funds raised by way of donations/contributions.

03. The matter has been examined in view of the need to cut down delays and inconvenience to the Co.operative Societies in the matter of obtaining sanction. In partial modification of the instructions at reference (1) above, the following instructions are issued:-

(i) Any Cooperative Society in the Sate celebrating Silver/Golden/Diamond/ Platinum Jubilee function may spend the amounts at the credit of Jubilee fund credited.

(ii) The expenditure towards the Jubilee Celebrations shall be limited to the amount at the credit of Jubilee fund as on 31st March of the preceding year and or at the credit of the funds raised out of donations/contributions for the purpose.

-2-

(iii) No amount shall be spent out of the working funds of the Cooperative Society for celebrating the Jubilee functions.

(iv) The society shall strictly follow all canons of financial propriety while incurring the expenditure.

04. The instructions issued vide Circular at ref. (1) above hold good in so far as deputation abroad or on foreign travel of the office bearers/directors of Cooperative Societies and conduct of inaugural functions are concerned.

05. The officers of the Department shall department shall ensure that these instructions are followed scrupulously by the Cooperative Institutions.

Sd/-
(V.MADHU)
Registrar of Cooperative
Societies in Karnataka,
Bangalore.

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052.**

ಸಂಖ್ಯೆ: ಆರ್‌ಎಸ್‌ಆರ್/134/ಎಕ್ಸ್‌ಎಂಸಿ/2007-08. ದಿನಾಂಕ: 10-12-2007.

**ಸುತ್ತೋಲೆ**

ವಿಷಯ:- ಅತ್ಯುತ್ತಮ/ಉತ್ತಮ ಸಹಕಾರ ಸಂಘಗಳು ತಮ್ಮ ಸಿಬ್ಬಂದಿಗೂ ಆಗಾಗ್ಗೆ ಸರ್ಕಾರಿ ನೌಕರರಿಗೆ ಅನ್ವಯವಾಗುವಂತೆ ತುಟ್ಟಿಭತ್ಯೆ ಮಂಜೂರು ಮಾಡುವ ಬಗ್ಗೆ.

--

ಸಹಕಾರ ಕ್ಷೇತ್ರವು ಎಲ್ಲಾ ರಂಗಗಳನ್ನು ಹಾಸುಹೊಕ್ಕಾಗಿ ಪ್ರವೇಶಿಸಿದ್ದು, ಅನೇಕ ಸಹಕಾರ ಸಂಘಗಳು ನಿರೀಕ್ಷೆಗೆ ಮೀರಿ ಅತ್ಯುತ್ತಮವಾಗಿ ಕೆಲಸ ನಿರ್ವಹಿಸುತ್ತಿವೆ. ಇಂತಹ ಸಹಕಾರ ಸಂಘಗಳು ಇನ್ನು ಹೆಚ್ಚು ಪರಿಣಾಮಕಾರಿಯಾಗಿ ಹಾಗೂ ಸಮರ್ಥ ನಿಕಾಯಗಳ (Corporate Bodies) ಮಾದರಿಯಲ್ಲಿ ಕೆಲಸ ನಿರ್ವಹಿಸುವಂತೆ ಪೂರಕ ವಾತಾವರಣ/ಪರಿಸರ ಕಲ್ಪಿಸುವುದು ಇಲಾಖೆಯ ಉದ್ದೇಶವಾಗಿದ್ದು, ಈ ನಿಟ್ಟಿನಲ್ಲಿ ಕೆಲವು ನಿಯಮ/ನಿಬಂಧನೆ/ಸುತ್ತೋಲೆ ನಿರ್ದೇಶನಗಳಿಂದ ವಿನಾಯ್ತಿ ನೀಡುವುದು ಸೂಕ್ತ ಕ್ರಮವಾಗಿರುತ್ತದೆ. ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ 1960 ರ ನಿಯಮ 17 ರನ್ವಯ ಸಹಕಾರ ಸಂಘಗಳು ತಮ್ಮ ಸಂಸ್ಥೆಯ ಸಿಬ್ಬಂದಿ ವೃಂದಬಲ ಹಾಗೂ ವೇತನ ಶ್ರೇಣಿಯನ್ನು ಅನುಮೋದಿಸಿಕೊಂಡು ತನ್ಮೂಲಕ ಕಾರ್ಯನಿರ್ವಹಿಸುತ್ತವೆ. ಅತ್ಯುತ್ತಮವಾಗಿ ಕೆಲಸ ನಿರ್ವಹಿಸುತ್ತಿರುವ ಇಂತಹ ಸಂಘಗಳಲ್ಲಿ ಸಿಬ್ಬಂದಿ ವರ್ಗವು ಶ್ರದ್ಧೆ, ನಿಷ್ಠೆಯಿಂದ ದುಡಿಯುತ್ತಿರುವುದು ಸಹ ಅನೇಕ ಕಾರಣಗಳಲ್ಲಿ ಒಂದು. ಸರಕಾರಿ ನೌಕರರಿಗೆ ಆಗಾಗ್ಗೆ ತುಟ್ಟಿಭತ್ಯೆ ಪರಿಷ್ಕರಿಸುವ ರೀತಿಯಲ್ಲಿಯೇ, ಇಂತಹ ಸಹಕಾರ ಸಂಘಗಳ ಸಿಬ್ಬಂದಿಗೂ ತುಟ್ಟಿಭತ್ಯೆ ಪರಿಷ್ಕರಿಸಿ ಮಂಜೂರು ಮಾಡುವ ಅಧಿಕಾರವನ್ನು ಆಯಾ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ನೀಡುವುದು ಸೂಕ್ತವೆಂದು ಅಭಿಪ್ರಾಯಪಡಲಾಗಿದೆ. ಇದಕ್ಕಾಗಿ ಕೆಲವು ಮಾನದಂಡಗಳನ್ನು ನಿಗದಿಪಡಿಸಿ ಇಂತಹ ಅಧಿಕಾರ ನೀಡುವುದು ಸಮಂಜಸವಾಗಿರುತ್ತದೆ. ಆದ್ದರಿಂದ ಈ ಕೆಳಗೆ ಕಾಣಿಸಿದ ಮಾನದಂಡಗಳನ್ವಯ ಉತ್ತಮವಾಗಿ ಕೆಲಸ ನಿರ್ವಹಿಸುತ್ತಿರುವ ಸಹಕಾರ ಸಂಘಗಳು, ತಮ್ಮ ಸಿಬ್ಬಂದಿಗೆ ಸರ್ಕಾರಿ ನೌಕರರಿಗೆ ಆಗಾಗ್ಗೆ ತುಟ್ಟಿಭತ್ಯೆಯನ್ನು ಪರಿಷ್ಕರಿಸಿ ಮಂಜೂಡು ಮಾಡುವ ರೀತಿಯಲ್ಲಿ ಆಯಾ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಅಧಿಕಾರ ನೀಡಲಾಗಿದೆ.

ಸಹಕಾರ ಸಂಘಗಳು ತಮ್ಮ ಸಿಬ್ಬಂದಿಗೆ ತುಟ್ಟಿಭತ್ಯೆ ಮಂಜೂರು ಮಡಲು ಅನುಸರಿಸಬೇಕಾದ ಮಾನದಂಡಗಳು:-

1. ಸತತ ಐದು ವರ್ಷಗಳಲ್ಲಿ ನಿವ್ವಳ ಲಾಭ ಗಳಿಸಿರಬೇಕು.
2. ಸಂಚಿತ ನಷ್ಟದಲ್ಲಿರಬಾರದು.
3. ಮಂಜೂರು ಮಾಡಬಹುದಾದ ತುಟ್ಟಿಭತ್ಯೆ ಸೇರಿ ಸಿಬ್ಬಂದಿ ವೆಚ್ಚವು ಶೇ.2.5 ನ್ನು ಮೀರಬಾರದು.
4. ಉದ್ದೇಶಿತ ತುಟ್ಟಿಭತ್ಯೆಯಲ್ಲಿ ಹೆಚ್ಚಳ ಮತ್ತು ಅದರಿಂದಾಗುವ ವಾರ್ಷಿಕ ಹೊರೆಯು ಸಂಘದ ನಿವ್ವಳ ಲಾಭವನ್ನು ಗಣನೀಯವಾಗಿ ಕಡಿಮೆ ಮಾಡತಕ್ಕದ್ದಲ್ಲ. ಈ ಹೆಚ್ಚಳವು ಕಳೆದ 3 ವರ್ಷಗಳ ಹೆಚ್ಚುವರಿ ಶೇಕಡಾ 25 ರಷ್ಟನ್ನು ಮೀರದಂತಿರಬೇಕೆನ್ನುವುದು ಒಂದು ತೆರದ ಮಾನದಂಡವಾಗಿರಬೇಕು. (ಹೆಚ್ಚುವರಿ ಮಾತ್ರ ಅಂದರೆ ನಿವ್ವಳ ಲಾಭ-ಶಿಕ್ಷಣ ನಿಧಿ-ಶೇಕಡಾ 10 ಡಿವಿಡೆಂಡ್-ಕಾಯ್ದಿಟ್ಟ ನಿಧಿ ವ್ಯಾಖ್ಯಾನಿಸಲಾಗಿದೆ). ಉದಾಹರಣೆಗೆ ಕೆಳಕಂಡ ಸಹಕಾರ ಸಂಸ್ಥೆಗಳ 3 ವರ್ಷಗಳ ವಿವರಗಳನ್ನು ಪರಿಶೀಲಿಸಿದ್ದು, ಷರಾದಲ್ಲಿ ಪರಿಣಾಮವನ್ನು ಶೇಕಡವಾರು ತೋರಿಸಲಾಗಿದೆ. ಇದು ಹೊರೆಯಾಗುವುದಿಲ್ಲ.

(ರೂ.ಲಕ್ಷಗಳಲ್ಲಿ)

| I | II | III | | | IV | | | V | | |
|---|---|---|---|---|---|---|---|---|---|---|
| | | ಎಕ್ಸ್–– ಡಿ.ಸಿ.ಸಿ. ಬ್ಯಾಂಕ್ | | | ಎ.ಬಿ.ಸಿ. ಸೊಸೈಟಿ | | | ಪಿ.ಕ್ಯೂ.ಆರ್.ಸೊಸೈಟಿ | | |
| | | **2004-05** | **2005-06** | **2006-07** | **2004-05** | **2005-06** | **2006-07** | **2004-05** | **2005-06** | **2006-07** |
| 1 | ನಿವ್ವಳ ಲಾಭ * | **416.02** | **592.85** | **636.72** | **118.99** | **154.77** | **172.56** | **80** | **100** | **120** |
| 2 | ಕಾಯ್ದಿಟ್ಟ ನಿಧಿ ** (minimum 25%) | **104** | **148.2** | **159.18** | **29.74** | **38.69** | **43.14** | **20.0** | **25.0** | **30.0** |
| 3 | ಶಿಕ್ಷಣ ನಿಧಿ 2% ** | **6.24** | **8.89** | **9.55** | **1.78** | **2.33** | **2.58** | **1.2** | **1.5** | **1.8** |
| 4 | 10% *** ಡಿವಿಡೆಂಡ್ (ವಜಾ) | **30.56** | **44.46** | **47.75** | **8.9** | **11.65** | **12.94** | **6.00** | **7.5** | **9.00** |
| 5 | ಇತರೆ ನಿಧಿಗಳು | **101.87** | **134.56** | **172.73** | **09.11** | **12.11** | **14.00** | **8.8** | **9.4** | **12.8** |
| 6 | ಹೆಚ್ಚುವರಿ 1–(2+3+4+5) | **173.53** | **256.74** | **247.51** | **69.46** | **89** | **99.9** | **44** | **55.6** | **66.4** |
| 7 | ಸರಾಸರಿ | | **225.92** | | | **86.12** | | | **55.6** | |
| 8 | ಇದರ 25% | | **56.48** | | | **21.53** | | | **13.9** | |
| 9 | ತುಟ್ಟಿಭತ್ಯೆ ಹೆಚ್ಚಳ | **4.53** | **5.55** | **6.27** | **2.30** | **2.27** | **3.87** | **4.5** | **5.00** | **6.00** |
| | ಒಟ್ಟು | | **16.35** | | | **8.44** | | | **14.5** | |
| 10 | ಷರಾ | ತುಟ್ಟಿಭತ್ಯೆ ಹೆಚ್ಚಳವು ಸರಾಸರಿಯ ಶೇ.25 ರ ಒಳಗೆ ಇದೆ. | | | ತುಟ್ಟಿಭತ್ಯೆ ಹೆಚ್ಚಳವು ಸರಾಸರಿಯ ಶೇ.25 ರ ಒಳಗೆ ಇದೆ. | | | ತುಟ್ಟಿಭತ್ಯೆ ಹೆಚ್ಚಳವು ಸರಾಸರಿಯ ಶೇ.25 ಕ್ಕಿಂತ ಹೆಚ್ಚಿಗೆ ಇರುತ್ತದೆ. | | |

5. ಈ ಮಾನದಂಡಗಳನ್ವಯ ಆಡಳಿತ ಮಂಡಳಿಯು ಸಂಘದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡ ತಮ್ಮ ಸಿಬ್ಬಂದಿಗೆ ಆಗಾಗ್ಗೆ ತುಟ್ಟಿಭತ್ಯೆ ಪರಿಷ್ಕರಿಸುವ ಬಗ್ಗೆ ಇಚ್ಛಿಸಿದಲ್ಲಿ ಮಾತ್ರ ಆಡಳಿತ ಮಂಡಳಿ ಸಭೆಯ ಸ್ಪಷ್ಟವಾದ ಅನುಮೋದನೆಯೊಂದಿಗೆ ಮಂಜೂರು ಮಾಡಬಹುದಾಗಿದೆ.

6. V ರಲ್ಲಿ ತೋರಿಸಿದಂತೆ ತುಟ್ಟಿಭತ್ಯೆ ಹೆಚ್ಚಳವು ಶೇಕಡಾ 25 ನ್ನು ಮಿರುತ್ತಿದ್ದಲ್ಲಿ ಅಂತಹ ಸಹಕಾರ ಸಂಘಗಳು ತಮ್ಮ ಹಂತದಲ್ಲಿ ಹೆಚ್ಚುವರಿ ತುಟ್ಟಿಭತ್ಯೆ ಮಂಜೂರು ಮಾಡತಕ್ಕದ್ದಲ್ಲ. ಅಂತಹ ಸಹಕಾರ ಸಂಘಗಳು ತುಟ್ಟಿಭತ್ಯೆ ಹೆಚ್ಚಿಸಲು ನಿಬಂಧಕರಿಗೆ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಬೇಕು.

7. ತುಟ್ಟಿಭತ್ಯೆ ಮಂಜೂರಾತಿಗಾಗಿ ಮೇಲೆ ಕಾಣಿಸಿದ ನಮೂನೆಯಲ್ಲಿ ಮಾಹಿತಿ ಸಹಿತ ಸಂಪೂರ್ಣ ಪ್ರಸ್ತಾವನೆಯನ್ನು ಆಡಳಿತ ಮಂಡಳಿ ಮುಂದೆ ಮಂಡಿಸತಕ್ಕದ್ದು.

ಈ ಮಾನದಂಡಗಳು ಸ್ವಯಂವೇದ್ಯವಾಗಿದ್ದು, ಉತ್ತಮವಾಗಿ ಕೆಲಸ ಮಾಡುವ ಸಹಕಾರ ಸಂಘಗಳು ತುಟ್ಟಿಭತ್ಯೆ ಪರಿಷ್ಕರಿಸುವ ಬಗ್ಗೆ ಸ್ವತಂತ್ರವಾಗಿ ತೀರ್ಮಾನ ತೆಗೆದುಕೊಳ್ಳಬಹುದಾಗಿದ್ದು, ಇಲಾಖೆಯಿಂದ ಯಾವುದೇ ಅನುಮತಿ ಪಡೆಯುವ ಅವಶ್ಯಕತೆಯಿರುವುದಿಲ್ಲವೆಂದೂ ಹಾಗೂ ಈ ಮಾನದಂಡಗಳನ್ನು ಉಲ್ಲಂಘಿಸಿ ತುಟ್ಟಿಭತ್ಯೆ ಮಂಜೂರು ಮಾಡಿದಲ್ಲಿ ಉಂಟಾಗುವ ಆರ್ಥಿಕ ಹೊರೆಗೆ ಅಂತಹ ಆಡಳಿತ ಮಂಡಳಿಯ ಸದಸ್ಯರು ಹೊಣೆಗಾರರಬೇಕಾಗುತ್ತದೆಂದು ಸ್ಪಷ್ಟೀಕರಿಸಲಾಗಿದೆ.

(ಸಹಿ)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

* ನಿವ್ವಳ ಲಾಭದಲ್ಲಿ ಆದಾಯಕರ ಕಳೆದು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

** ಇಲ್ಲಿ ಕಾಣಿಸಿದ ಕಾಯ್ದಿಟ್ಟ ನಿಧಿ, ಶಿಕ್ಷಣ ನಿಧಿ ಹಾಗೂ ಡಿವಿಡೆಂಡ್ ಇವುಗಳು ಶಾಸನಬದ್ಧವಾದ ಕಡಿಮೆ ದರಗಳಿದ್ದು, ಹೆಚ್ಚಿಗೆ ಅವಕಾಶ ಮಾಡಿದ್ದಲ್ಲಿ (ಉದಾಹರಣೆಗೆ ಶೇಕಡಾ 30% ಕಾಯ್ದಿಟ್ಟ ನಿಧಿಗಳು ಇದ್ದಲ್ಲಿ) ಈ ನಿಜಬೆಲೆಗಳನ್ನು (actuals) ತೆಗೆದುಕೊಳ್ಳತಕ್ಕದ್ದು.

*** ಒಂದು ಪಕ್ಷ ಡಿವಿಡೆಂಡ್ ಕೊಡಲಿಲ್ಲ ಅಂದರೆ, ಕನಿಷ್ಠ 10% ಡಿವಿಡೆಂಡ್ ಅನ್ನು ಭಾವಿಸಿ ಲೆಕ್ಕಾಚಾರ ಮಾಡಬೇಕು. ಶೇ.10 ಕ್ಕಿಂತ ಜಾಸ್ತಿ ಡಿವಿಡೆಂಡ್ ಕೊಟ್ಟರೆ ನಿಜಬೆಲೆಗಳನ್ನು (actuals) ತೆಗೆದುಕೊಳ್ಳತಕ್ಕದ್ದು.

**<u>ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052.</u>**

ಸಂಖ್ಯೆ: ಆರ್‌ಎಸ್‌ಆರ್/ /ಎಕ್ಸ್‌ಎಂಸಿ/2007-08. ದಿನಾಂಕ: 06-02-2008.

**<u>ಸುತ್ತೋಲೆ</u>**

ವಿಷಯ:- ಕೃಷಿಯೇತರ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡುವ ಬಗ್ಗೆ.

ಉಲ್ಲೇಖ:- 1) ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕೆ ಮತ್ತು ಇತರೆ) ಇವರ ದಿನಾಂಕ 1-2-2008 ರ ಆಂತರಿಕ ಟಿಪ್ಪಣಿ ಸಂ.ಹೆಚ್‌ಎಸ್‌ಜಿ-2/ 139/159/ಹೆಚ್‌ಹೆಚ್‌ಎಸ್/2007-08.
2) ಸರ್ಕಾರದ ಪತ್ರ ಸಂ.ಸಿಓ/02/ಸಿಹೆಚ್‌ಎಸ್/2008, ದಿ: 9-1-2008.
3) ಕ್ರ.ಸಂ.ಯುಬಿಸಿ-3/111/ಯುಎಂಸಿ/2004-05, ದಿನಾಂಕ 30-11-2004.
4) ಕ್ರ.ಸಂ.ಯುಬಿಸಿ-1/ಯುಎಂಸಿ/99/93-94, ದಿನಾಂಕ 2-2-1994.
5) ಕ್ರ.ಸಂ.ಯುಬಿಸಿ-3/ಯುಎಂಸಿ/16/98-99, ದಿನಾಂಕ 16-7-1998.
6) ಕ್ರ.ಸಂ.ಯುಬಿಸಿ-3/ಯುಎಂಸಿ/26/2002-03, ದಿನಾಂಕ 21-12-2002.
7) ಸಹಕಾರ ಸಂಘಗಳ ನಿಬಂಧಕರ ಪತ್ರ ಸಂ.ಆರ್‌ಎಸ್‌ಆರ್/ಸೌಕಾ/98/ ಎಕ್ಸ್‌ಎಂಸಿ/2004-05, ದಿನಾಂಕ 24-3-2005.

--

ರಾಜ್ಯದಲ್ಲಿ ಹೊಸ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನೋಂದಣಿ ಮಾಡಬಾರದೆಂದು ಒಂದು ವೇಳೆ ನೋಂದಣಿ ಮಾಡುವ ಅಗತ್ಯತೆ ಇದ್ದಲ್ಲಿ ಸರ್ಕಾರದಿಂದ ಆಡಳಿತಾತ್ಮಕವಾಗಿ ಪೂರ್ವಾನುಮತಿಯನ್ನು ಪಡೆಯಬೇಕೆಂದು, ಹೊಸ ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ಕೆಲವು ಜಿಲ್ಲೆಗಳಲ್ಲಿ ನೋಂದಣಿ ಮಾಡಬಾರದೆಂದೂ, ಒಂದು ವೇಳೆ ನೋಂದಣಿ ಮಾಡಲೇಬೇಕಾದ ಅಗತ್ಯತೆ ಬಿದ್ದಲ್ಲಿ ಸರ್ಕಾರದಿಂದ ಆಡಳಿತಾತ್ಮಕವಾಗಿ ಪೂರ್ವಾನುಮೋದನೆಯ ಪಡೆಯಬೇಕೆಂದು ಹಾಗೂ ಬೆಂಗಳೂರು ನಗರದಲ್ಲಿ ಹೊಸ ಪತ್ತಿನ ಸಹಕಾರ ಸಂಘ ನೋಂದಣಿ ಮಾಡಬಾರದೆಂದೂ, ಒಂದು ವೇಳೆ ನೋಂದಣಿ ಮಾಡಲೇಬೇಕಾದಲ್ಲಿ ಸರ್ಕಾರದಿಂದ ಆಡಳಿತಾತ್ಮಕವಾಗಿ ಪೂರ್ವಾನುಮತಿಯನ್ನು ಪಡೆಯಬೇಕೆಂದೂ ಸೂಚಿಸಿದ್ದ ಆದೇಶ/ಸುತ್ತೋಲೆ/ಸೂಚನೆಗಳನ್ನು ಉಲ್ಲೇಖ(2) ರ ಪತ್ರದಲ್ಲಿ ಹಿಂಪಡೆಯಲಾಗಿದೆ. ಹೊಸ ಸಹಕಾರ ಸಂಘಗಳನ್ನು ಸ್ಥಾಪಿಸಲು ಪ್ರಸ್ತಾವೆಯಲ್ಲಿ ಇರುವ ಅಡೆ-ತಡೆಗಳನ್ನು ತೆಗೆದುಹಾಕುವುದು ಸಮಂಜಸವೆಂದು ಭಾವಿಸಿ, ಇನ್ನು ಮುಂದೆ ಹೊಸ ಸಹಕಾರ ಸಂಘಗಳನ್ನು ನೋಂದಾಯಿಸಲು ಪ್ರಸ್ತಾವೆಗಳನ್ನು ಸರ್ಕಾರಕ್ಕೆ ಕಳುಹಿಸಬಾರದೆಂದೂ ಮತ್ತು ಸಹಕಾರ ಸಂಘಗಳ ನಿಬಂಧಕರು ನೋಂದಣಿ ಅಧಿಕಾರಗಳನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರನ್ವಯ ಚಲಾಯಿಸತಕ್ಕದ್ದೆಂದೂ ಸಹ ಸರ್ಕಾರವು ಸೂಚಿಸಿರುತ್ತದೆ. ಈ ದಿಸೆಯಲ್ಲಿ ಸಹಕಾರ ಸಂಘಗಳ ನಿಬಂಧಕರು ಸೂಕ್ತ ಮಾರ್ಗಸೂಚಿಗಳನ್ನು ಅಧೀನ ಅಧಿಕಾರಿಗಳಿಗೆ ನೀಡಬಹುದೆಂದು ತಿಳಿಸಿದೆ. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ನೀಡಲಾಗಿದೆ.

**<u>ಕೃಷಿಯೇತರ ಪತ್ತಿನ ಸಹಕಾರ ಸಂಘಗಳನ್ನು ನೋಂದಾಯಿಸುವ ಬಗ್ಗೆ ಮಾರ್ಗಸೂಚಿಗಳು:-</u>**

1. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 4 ರನ್ವಯ ಸಹಕಾರ ಸಂಘಗಳನ್ನು ಸದರಿ ಅಧಿನಿಯಮದಡಿ ಸೂಚಿಸಿರುವ ಷರತ್ತುಗೊಳಪಟ್ಟು ನಿಯಮಾನುಸಾರ ಆರ್ಥಿಕ ಸದೃಢತೆಯಿಂದ (economically viable) ನಡೆಯುವ ಸಾಧ್ಯತೆಯಿದೆ ಎಂಬುದನ್ನು ಹಾಗೂ ಹಾಗೆ ಮಾಡುವುದರಿಂದ

ಹಾಲಿ ಇರುವ ಸಹಕಾರ ಸಂಘಗಳ ಬೆಳವಣಿಗೆಗೆ ಯಾವುದೇ ಬಾಧಕ ಉಂಟಾಗುವುದಿಲ್ಲ ಎಂಬುದನ್ನು ಖಾತರಿಪಡಿಸಕೊಳ್ಳತಕ್ಕದ್ದು. ಇದರ ಜೊತೆಗೆ ಮುಂದಿನ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು.

2. ಕೃಷಿಯೇತರ ಪತ್ತಿನ ಸಹಕಾರ ಸಂಘಗಳ ಸ್ಥಾಪಿಸುವ ಪೂರ್ವದಲ್ಲಿ ಷೇರು ಸಂಗ್ರಹಿಸಲು ಅನುಮತಿ ನೀಡುವ ಮೊದಲು ಸ್ಥಳೀಯ ಜನಸಂಖ್ಯೆ ಹಾಲಿ ಇರುವ ಇಂತಹ ಸಂಘಗಳ ವಹಿವಾಟು ಆರ್ಥಿಕವಾಗಿ ಸಬಲತೆ ಹೊಂದುವುದೇ ಎಂಬ ಬಗ್ಗೆ ಖಾತರಿಪಡಿಸಿಕೊಳ್ಳತಕ್ಕದ್ದು.

3. ಈ ತರಹದ ಸಂಘಗಳ ಉಪನಿಯಮಗಳನ್ನು ನೋಂದಾಯಿಸುವಾಗ ಸದಸ್ಯೇತರರಿಂದ (ಸದಸ್ಯರಲ್ಲದವರಿಂದ) ಠೇವಣಿ ಸಂಗ್ರಹಿಸುವುದನ್ನು/ವ್ಯವಹರಿಸುವುದನ್ನು ನಿರ್ಬಂಧಿಸತಕ್ಕದ್ದು.

4. ಸಂಘಗಳ ಹೆಸರಿನಲ್ಲಾಗಲೀ/ಉದ್ದೇಶಗಳಲ್ಲಾಗಲೀ ಬ್ಯಾಂಕ್, ಬ್ಯಾಂಕರ್, ಬ್ಯಾಂಕಿಂಗ್ ಇತ್ಯಾದಿ ಶಬ್ದಗಳನ್ನು ಉಪಯೋಗಿಸತಕ್ಕದ್ದಲ್ಲ.

5. ಕೃಷಿಯೇತರ ಪತ್ತಿನ ಸಹಕಾರ ಸಂಘಗಳ ನೋಂದಣಿ ಮಾಡುವಾಗ ಆರ್ಥಿಕ ಸಬಲತೆಯನ್ನು ಖಚಿತಪಡಿಸಿಕೊಳ್ಳಲು ಸಂಗ್ರಹಿಸಬೇಕಾದ ಕನಿಷ್ಠ ಷೇರು ಹಣದ ಮಿತಿಯನ್ನು ಈ ಕೆಳಗಿನಂತೆ ಪುನ: ಪರಿಷ್ಕರಿಸಲಾಗಿದೆ.

| ಕ್ರ.ಸಂ. | ಸಹಕಾರಿಯ ಕಾರ್ಯ ವ್ಯಾಪ್ತಿಯ ಜನಸಂಖ್ಯೆ | ಕನಿಷ್ಠ ಸದಸ್ಯರು | ಪ್ರಾರಂಭಿಕವಾಗಿ ಷೇರು ಧನ ಸಂಗ್ರಹಿಸಬೇಕಾದ ಮೊತ್ತ |
|---|---|---|---|
| 1 | 2 ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ | 200 | ರೂ.4.00 ಲಕ್ಷ |
| 2 | 2 ಲಕ್ಷದ ಮೇಲ್ಪಟ್ಟು, 5 ಲಕ್ಷದವರೆಗೆ | 300 | ರೂ.6.00 ಲಕ್ಷ |
| 3 | 5.00 ಲಕ್ಷದ ಮೇಲ್ಪಟ್ಟು 10 ಲಕ್ಷದವರೆಗೆ | 500 | ರೂ.10.00 ಲಕ್ಷ |
| 4 | 10.00 ಲಕ್ಷದ ಮೇಲ್ಪಟ್ಟು 20 ಲಕ್ಷದವರೆಗೆ | 750 | ರೂ.15.00 ಲಕ್ಷ |
| 5 | 20 ಲಕ್ಷಕ್ಕೆ ಮೇಲ್ಪಟ್ಟು | 1000 | ರೂ.20.00 ಲಕ್ಷ |

ಮಹಿಳೆಯರು ಪ.ಜಾ./ಪ.ಪಂಗಡ/ಮತ್ತು ಅಲ್ಪ ಸಂಖ್ಯಾತರರು ಸೂಚಿಸುವ ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಗೆ ಮೇಲೆ 4 ರಲ್ಲಿ ನಮೂದಿಸಿರುವ ಸದಸ್ಯರ ಹಾಗೂ ಸಂಗ್ರಹಿಸಬೇಕಾದ ಷೇರು ಹಣದ ಶೇಕಡಾ 50 ರಷ್ಟು ಗುರಿ ನಿಗಧಿಪಡಿಸತಕ್ಕದ್ದು.

ಈ ಪರಿಷ್ಕರಣೆ ಹೊರತುಪಡಿಸಿ ಉಲ್ಲೇಖದ ಸುತ್ತೋಲೆಗಳ ಪ್ರಕಾರ ಇನ್ನುಳಿದ ಮಾರ್ಗಸೂಚಿಗಳು ಜಾರಿಯಲ್ಲಿರುತ್ತವೆ.

5. ಈ ಮಾನದಂಡಗಳನ್ವಯ ಆಡಳಿತ ಮಂಡಳಿಯು ಸಂಘದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡ ತಮ್ಮ ಸಿಬ್ಬಂದಿಗೆ ಆಗಾಗ್ಗೆ ತುಟ್ಟಿಭತ್ಯೆ ಪರಿಷ್ಕರಿಸುವ ಬಗ್ಗೆ ಇಚ್ಛಿಸಿದಲ್ಲಿ ಮಾತ್ರ ಆಡಳಿತ ಮಂಡಳಿ ಸಭೆಯ ಸ್ಪಷ್ಟವಾದ ಅನುಮೋದನೆಯೊಂದಿಗೆ ಮಂಜೂರು ಮಾಡಬಹುದಾಗಿದೆ.

6. V ರಲ್ಲಿ ತೋರಿಸಿದಂತೆ ತುಟ್ಟಿಭತ್ಯೆ ಹೆಚ್ಚಳವು ಶೇಕಡಾ 25 ನ್ನು ಮಿರುತ್ತಿದ್ದಲ್ಲಿ ಅಂತಹ ಸಹಕಾರ ಸಂಘಗಳು ತಮ್ಮ ಹಂತದಲ್ಲಿ ಹೆಚ್ಚುವರಿ ತುಟ್ಟಿಭತ್ಯೆ ಮಂಜೂರು ಮಾಡತಕ್ಕದ್ದಲ್ಲ. ಅಂತಹ ಸಹಕಾರ ಸಂಘಗಳು ತುಟ್ಟಿಭತ್ಯೆ ಹೆಚ್ಚಿಸಲು ನಿಬಂಧಕರಿಗೆ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಬೇಕು.

7. ತುಟ್ಟಿಭತ್ಯೆ ಮಂಜೂರಾತಿಗಾಗಿ ಮೇಲೆ ಕಾಣಿಸಿದ ನಮೂನೆಯಲ್ಲಿ ಮಾಹಿತಿ ಸಹಿತ ಸಂಪೂರ್ಣ ಪ್ರಸ್ತಾವನೆಯನ್ನು ಆಡಳಿತ ಮಂಡಳಿ ಮುಂದೆ ಮಂಡಿಸತಕ್ಕದ್ದು.

ಈ ಮಾನದಂಡಗಳು ಸ್ವಯಂವೇದ್ಯವಾಗಿದ್ದು, ಉತ್ತಮವಾಗಿ ಕೆಲಸ ಮಾಡುವ ಸಹಕಾರ ಸಂಘಗಳು ತುಟ್ಟಿಭತ್ಯೆ ಪರಿಷ್ಕರಿಸುವ ಬಗ್ಗೆ ಸ್ವತಂತ್ರವಾಗಿ ತೀರ್ಮಾನ ತೆಗೆದುಕೊಳ್ಳಬಹುದಾಗಿದ್ದು, ಇಲಾಖೆಯಿಂದ ಯಾವುದೇ ಅನುಮತಿ ಪಡೆಯುವ ಅವಶ್ಯಕತೆಯಿರುವುದಿಲ್ಲವೆಂದೂ ಹಾಗೂ ಈ ಮಾನದಂಡಗಳನ್ನು ಉಲ್ಲಂಘಿಸಿ ತುಟ್ಟಿಭತ್ಯೆ ಮಂಜೂರು ಮಾಡಿದಲ್ಲಿ ಉಂಟಾಗುವ ಆರ್ಥಿಕ ಹೊರೆಗೆ ಅಂತಹ ಆಡಳಿತ ಮಂಡಳಿಯ ಸದಸ್ಯರು ಹೊಣೆಗಾರರಬೇಕಾಗುತ್ತದೆಂದು ಸ್ಪಷ್ಟೀಕರಿಸಲಾಗಿದೆ.

(ಸಹಿ)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

* ನಿವ್ವಳ ಲಾಭದಲ್ಲಿ ಆದಾಯಕರ ಕಳೆದು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

** ಇಲ್ಲಿ ಕಾಣಿಸಿದ ಕಾಯ್ದಿಟ್ಟ ನಿಧಿ, ಶಿಕ್ಷಣ ನಿಧಿ ಹಾಗೂ ಡಿವಿಡೆಂಡ್ ಇವುಗಳು ಶಾಸನಬದ್ಧವಾದ ಕಡಿಮೆ ದರಗಳಿದ್ದು, ಹೆಚ್ಚಿಗೆ ಅವಕಾಶ ಮಾಡಿದ್ದಲ್ಲಿ (ಉದಾಹರಣೆಗೆ ಶೇಕಡಾ 30% ಕಾಯ್ದಿಟ್ಟ ನಿಧಿಗಳು ಇದ್ದಲ್ಲಿ) ಈ ನಿಜಬೆಲೆಗಳನ್ನು (actuals) ತೆಗೆದುಕೊಳ್ಳತಕ್ಕದ್ದು.

*** ಒಂದು ಪಕ್ಷ ಡಿವಿಡೆಂಡ್ ಕೊಡಲಿಲ್ಲ ಅಂದರೆ, ಕನಿಷ್ಠ 10% ಡಿವಿಡೆಂಡ್ ಅನ್ನು ಭಾವಿಸಿ ಲೆಕ್ಕಾಚಾರ ಮಾಡಬೇಕು. ಶೇ.10 ಕ್ಕಿಂತ ಜಾಸ್ತಿ ಡಿವಿಡೆಂಡ್ ಕೊಟ್ಟರೆ ನಿಜಬೆಲೆಗಳನ್ನು (actuals) ತೆಗೆದುಕೊಳ್ಳತಕ್ಕದ್ದು.

.